ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ

06 ಜುಲೈ, 2026 ಸೋಮವಾರ ಬೆಲೆ ₹ 2.00 ಸಂಪುಟ : 20 ಸಂಚಿಕೆ : 117 ಪುಟ-4 ಹಾಸನ E-mail : prajodayahsn@gmail.com RNI NO: KARKAN/2007/22629



ಬ್ರಿಟನ್ ಪ್ರಧಾನ ಮಂತ್ರಿ ಹಾಗೂ ಲೇಬರ್ ಪಕ್ಷದ ನಾಯಕತ್ವಕ್ಕೆ ರಾಜೀನಾಮೆ ನೀಡುವ ತಮ್ಮ ನಿರ್ಧಾರ ತೀರಾ ವೈಯಕ್ತಿಕವಾದದ್ದು ಎಂದು ಕೀರ್ ಸ್ಟಾರ್ಮರ್ ಅವರು ಭಾನುವಾರ ಸ್ಪಷ್ಟಪಡಿಸಿದ್ದಾರೆ.



ರೈತರ ಸುಲಿಗೆಗೆ ಮಿತಿಯಿಲ್ಲ » 2


ಜನ ಸೇವೆ ಮಾಡಿ ದ್ವೇಷ ರಾಜಕಾರಣ ಬಿಡಿ » 3


ಆಯೋಧ್ಯೆ ದೇಣಿಗೆ ಕಳವು ಪ್ರಕರಣ : ಹಲವರ ಬಂಧನ » 4


# ಅಧಿಕಾರದಲ್ಲಿ ಮುಂದುವರೆಯಲು ಮಸೂದೆಗಳ ಜಾರಿ

## ಡಿಲಿಮಿಟೇಷನ್, ಜನಪ್ರತಿನಿಧಿಗಳ ಅನರ್ಹತೆ ಕಾಯ್ದೆ ವಿರುದ್ಧ ಮಲ್ಲಿಕಾರ್ಜುನ ಖರ್ಗೆ ಆಕ್ಷೇಪ

• ಪ್ರಜೋದಯ ವರದಿ

**ಬೆಂಗಳೂರು:** ಕೇಂದ್ರ ಸರ್ಕಾರ ಡಿಲಿಮಿಟೇಷನ್ (ಕ್ಷೇತ್ರ ಪುನರ್ ವಿಂಗಡಣೆ), ಜನಪ್ರತಿನಿಧಿಗಳ ಅನರ್ಹತೆ ಹಾಗು ಒಂದು ರಾಷ್ಟ್ರ ಒಂದು ಚುನಾವಣೆ ಮಸೂದೆ ಜಾರಿಗೊಳಿಸುವ ಮೂಲಕ ಅಧಿಕಾರದಲ್ಲಿ ಮುಂದುವರೆಯಲು ಪ್ರಯತ್ನಿಸುತ್ತಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಆರೋಪಿಸಿದರು.

ಬೆಂಗಳೂರು ಗ್ರಾಮಾಂತರ ಜಿಲ್ಲಾ ಡಳಿತ ಭವನದ ಬಳಿ 14 ಅಡಿ ಎತ್ತರದ ಅಂಬೇಡ್ಕರ್ ಕಂಚಿನ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ ಅವರು, ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ವಿರೋಧ ಪಕ್ಷಗಳ ಚರ್ಚೆಗೆ ಸರಿಯಾದ ಕಾಲಾವಕಾಶ ನೀಡುತ್ತಿಲ್ಲ. ಈ ಬಾರಿಯ ಅಧಿವೇಶನದಲ್ಲಿ ಕೇಂದ್ರ ಸರ್ಕಾರ ಮೂರು ಪ್ರಮುಖ ಮಸೂದೆಗಳನ್ನು ತರಲು ಮುಂದಾಗಿದೆ. ಡಿಲಿಮಿಟೇಷನ್ ಮಸೂದೆಯ ಮೂಲಕ ವಿಧಾನಸಭಾ ಕ್ಷೇತ್ರಗಳನ್ನು ತಮಗೆ ಅನುಕೂಲವಾಗುವಂತೆ ಮರು ವಿಂಗಡಿಸಲು ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದ್ದಾರೆ.



ಅಸ್ಸಾಂನಲ್ಲಿ ಈಗಾಗಲೇ ಇದೇ ಮಾದರಿಯ ಕ್ರಮಕೈಗೊಳ್ಳಲಾಗಿತ್ತು. ಅದನ್ನು ದೇಶಾದ್ಯಂತ ಜಾರಿಗೊಳಿಸಲು ಸರ್ಕಾರ ಮುಂದಾಗಿದೆ. ಕ್ಷೇತ್ರಗಳ ಮರು ವಿಂಗಡಣೆಯಿಂದ ಯಾರ ಕ್ಷೇತ್ರ ಉಳಿಯಲಿದೆ, ಯಾರ ಕ್ಷೇತ್ರ ಬದಲಾಗಲಿದೆ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಅಧಿಕಾರದಲ್ಲಿ ಮುಂದುವರಿಯುವ ಉದ್ದೇಶ ದಿಂದಲೇ ಈ ಮಸೂದೆಗಳನ್ನು ತರಲಾಗುತ್ತಿದೆ. ಸಚಿವರು ಅಥವಾ ಜನಪ್ರತಿನಿಧಿಗಳು 30 ದಿನ ಜೈಲಿನಲ್ಲಿದ್ದರೂ ಅನರ್ಹಗೊಳಿಸುವ ಕಾನೂನು ತರಲು ಸರ್ಕಾರ ಯೋಚಿಸುತ್ತಿದೆ. ಅನರ್ಹತೆ ಮಾಡಬೇಕಾದರೆ ಕನಿಷ್ಠ ಐದು ವರ್ಷ ಶಿಕ್ಷೆಯಾಗುವ ಪ್ರಕರಣಗಳಲ್ಲಿ ಮಾತ್ರ ಅನ್ವಯಿಸಬೇಕೆಂದು ಅಭಿಪ್ರಾಯಪಟ್ಟರು.

**20 ಸಾವಿರ ಕೋಟಿ ಲೂಟಿ**

ರಾಮಮಂದಿರದ ಹೆಸರಿನಲ್ಲಿ 20 ಸಾವಿರ ಕೋ. ರೂ.ಲೂಟಿ ನಡೆದಿದೆ ಎಂಬ ಸುದ್ದಿಗಳು ಬರುತ್ತಿವೆ. ಅಯೋಧ್ಯೆಯಲ್ಲಿ ನಡೆದಿರುವ ರೀತಿಯ ಘಟನೆಗಳು ಬದರಿನಾಥ, ಕೇದಾರನಾಥ ಹಾಗು ಅಮರನಾಥ ದೇವಾಲಯದಲ್ಲೂ ಮರುಕಳಿಸುವ ಸಾಧ್ಯತೆ ಇದೆ ಎಂದು ಆತಂಕ ವ್ಯಕ್ತಪಡಿಸಿದರು.

ಅಯೋಧ್ಯೆಯಲ್ಲಿ ಬಡವರು, ದಲಿತರು ಅಥವಾ ರೈತರು ಹಣ ಲೂಟಿ ಮಾಡಿಲ್ಲ. ಪ್ರಭಾವಿ ವರ್ಗದವರು ಹಾಗು ಆರ್‌ಎಸ್‌ಎಸ್, ಬಿಜೆಪಿ ಪರವಾಗಿರುವವರು ಹಣ ಲೂಟಿ ಮಾಡಿದ್ದಾರೆ. ಪ್ರತಿದಿನ ದೇವರ ಹೆಸರು ಜಪಿಸುವವರು, ಅದೇ ದೇವರ ಹೆಸರಿನಲ್ಲಿ ಲೂಟಿ ಮಾಡುತ್ತೀರಾ ಎಂದು ಪ್ರಶ್ನಿಸಿದ ಅವರು, ಧರ್ಮ ಹಾಗು ಶ್ರೀ ರಾಮನ ಹೆಸರನ್ನು ರಾಜಕೀಯ ಪ್ರಚಾರಕ್ಕೆ ಬಳಸಿಕೊಂಡು ಭ್ರಷ್ಟಾಚಾರ ನಡೆಸಲಾಗುತ್ತಿದೆ ಎಂದು ದೂರಿದರು.

ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಹರಿಯಾಣ ಹಾಗು ಅಸ್ಸಾಂ ರಾಜ್ಯಗಳಲ್ಲಿ ಮತ ಕಳವು ನಡೆದಿದೆ. ಅಧಿಕಾರದ ದುರುಪಯೋಗದಿಂದ ಯಾರನ್ನಾದರೂ ಬಗ್ಗಿಸಬಹುದೆಂಬ ಸಂದೇಶವನ್ನು ಕೇಂದ್ರ ಸರ್ಕಾರ ನೀಡುತ್ತಿದೆ. ಇಡಿ ಮತ್ತು ಸಿಬಿಐ ಸಂಸ್ಥೆಗಳನ್ನು ರಾಜಕೀಯ ಉದ್ದೇಶಗಳಿಗೆ ಬಳಸಿಕೊಳ್ಳಲಾಗುತ್ತಿದೆ. ಇದಕ್ಕೋಸ್ಕರ ಅಂಬೇಡ್ಕರ್ ಅವರು ಸಂವಿಧಾನ ರಚಿಸಿದ್ದಾರೆಯೇ ಎಂದು ಪ್ರಶ್ನಿಸಿದ ಅವರು, ಸಂವಿಧಾನವನ್ನು ಗೌರವಿಸದಿದ್ದರೆ ದೇಶದಲ್ಲಿ ನ್ಯಾಯ ದೊರೆಯುವುದಿಲ್ಲ. ಪ್ರಜಾಪ್ರಭುತ್ವ ಮತ್ತು ಸಂವಿಧಾನವನ್ನು ಉಳಿಸಲು ಎಲ್ಲರೂ ಎಚ್ಚೆತ್ತುಕೊಳ್ಳಬೇಕೆಂದು ಕರೆ ನೀಡಿದರು.

### ಮೋದಿ ಪ್ರೋತ್ಸಾಹದಿಂದ ಮತಗಳ್ಳತನ

ರಾಮ ಮಂದಿರ ದೇವಾಲಯದಲ್ಲಿ ಆರ್‌ಎಸ್‌ಎಸ್ ಹಾಗು ಬಿಜೆಪಿಗೆ ಸೇರಿದವರು ಹಣ ಕಳವು ಮಾಡುತ್ತಿದ್ದರೆ, ಇತ್ತ ಬಿಜೆಪಿ ರಾಜಕೀಯ ನಾಯಕರು ನರೇಂದ್ರ ಮೋದಿ ಪ್ರೋತ್ಸಾಹದಿಂದ ಮತ ಕಳವು ಮಾಡುತ್ತಿದ್ದಾರೆ. ಧಾರ್ಮಿಕ ಸಂಸ್ಥೆಗಳಲ್ಲಿ ಹಣ ಕಳ್ಳತನ ನಡೆಯುತ್ತಿರುವಂತೆ, ಬಿಜೆಪಿ ನಾಯಕರು ಮತ ಕಳ್ಳತನ ಮಾಡುತ್ತಿದ್ದಾರೆ. ಎಸ್‌ಐಆರ್ ಮೂಲಕ ಹೊಸ ನಿಯಮಗಳನ್ನ ತಂದು ಮತ ಕಳವಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಂದಲೇ ರಾಜಕೀಯ ನಾಯಕರಿಗೆ ಮತ ಕಳವು ಮಾಡಲು ಪ್ರೋತ್ಸಾಹ ಸಿಗುತ್ತಿದೆ ಎಂದು ಮಲ್ಲಿಕಾರ್ಜುನ ಖರ್ಗೆ ಅವರು ವಾಗ್ದಾಳಿ ನಡೆಸಿದರು.

## ಎಸ್‌ಐಆರ್ ಅಕ್ರಮ : ಕೇಂದ್ರ ಚುನಾವಣಾ ಆಯೋಗಕ್ಕೆ ಇಂದು ದೂರು

• ಪ್ರಜೋದಯ ವರದಿ

**ಬೆಂಗಳೂರು :** ರಾಜ್ಯದಲ್ಲಿ ನಡೆದಿರುವ ವಿಶೇಷ ಮತದಾರರ ಪಟ್ಟಿ ಪರಿಷ್ಕರಣೆ (ಎಸ್‌ಐಆರ್) ಯಲ್ಲಿ ಅಕ್ರಮಗಳು ನಡೆಯುತ್ತಿರುವ ಬಗ್ಗೆ ಕೇಂದ್ರ ಚುನಾವಣಾ ಆಯೋಗಕ್ಕೆ ದೂರು ನೀಡಲು ಬಿಜೆಪಿ ಮತ್ತು ಜೆಡಿಎಸ್ ಮುಂದಾಗಿವೆ.

ರಾಜ್ಯದಲ್ಲಿನ ಎಸ್‌ಐಆರ್‌ನಲ್ಲಿ ಅಕ್ರಮಗಳು ನಡೆಯುತ್ತಿದ್ದು, ನಿಯಮ ಬದ್ಧವಾಗಿ ಎಸ್‌ಐಆರ್ ನಡೆಸುವಂತೆ ಕೇಂದ್ರ ಚುನಾವಣಾ ಆಯೋಗವನ್ನು ಕೋರಲು ಎರಡು ಪಕ್ಷಗಳು ನಿರ್ಧರಿಸಿದ್ದು, ಅದರಂತೆ ಸೋಮವಾರ ದೆಹಲಿಯಲ್ಲಿ ಕೇಂದ್ರ ಸಚಿವರಾದ ಹೆಚ್.ಡಿ. ಕುಮಾರಸ್ವಾಮಿ ಮತ್ತು ಪ್ರಹ್ಲಾದ್ ಜೋಷಿ ಅವರು ಕೇಂದ್ರ ಚುನಾವಣಾ ಆಯೋಗದ ಮುಖ್ಯ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಭೇಟಿ ಮಾಡಿ, ಎಸ್‌ಐಆರ್‌ನಲ್ಲಿ ಅಕ್ರಮ ಬಗ್ಗೆ ದಾಖಲೆಗಳ ಸಮೇತ ದೂರು ನೀಡಲಿದ್ದಾರೆ.

ರಾಜ್ಯದಲ್ಲಿ ನಡೆಯುತ್ತಿರುವ ಎಸ್‌ಐಆರ್‌ನಲ್ಲಿ ಅಕ್ರಮಗಳು ನಡೆಯುತ್ತಿರುವುದರಿಂದ, ಈ ಎಸ್‌ಐಆರ್ ಪ್ರಕ್ರಿಯೆಯನ್ನು ರದ್ದುಪಡಿಸಿ, ಹೊಸದಾಗಿ ಎಸ್‌ಐಆರ್‌ನಡೆಸುವಂತೆಯೂ ಈ ನಾಯಕರು ಕೋರಲಿದ್ದಾರೆ.

ಪ್ರತಿ ಬಿಎಲ್‌ಓಗಳು ಮನೆ ಮನೆಗೆ ಭೇಟಿ ನೀಡಿ ಎಸ್‌ಐಆರ್ ನಡೆಸಬೇಕೆಂಬುದು ಕಡ್ಡಾಯವಾಗಿದ್ದರೂ ಕಲ್ಯಾಣ ಮಂಟಪ, ದರ್ಗಾ, ಮಸೀದಿ, ಹಳ್ಳಿಕಟ್ಟೆ, ಕೆಲವು ನಾಯಕರುಗಳು ಮನೆಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಯುತ್ತಿದ್ದು, ಬಿಎಲ್‌ಓಗಳನ್ನು ರಾಜ್ಯ ಸರ್ಕಾರ ದುರ್ಬಳಕೆ ಮಾಡಿಕೊಂಡು ಎಸ್‌ಐಆರ್‌ನಲ್ಲಿ ಅಕ್ರಮ ನಡೆಸುತ್ತಿದೆ ಎಂಬುದನ್ನು ಕೇಂದ್ರ ಚುನಾವಣಾ ಆಯುಕ್ತರ ಗಮನಕ್ಕೆ ತರಲಿದ್ದಾರೆ.

ರಾಜ್ಯ ಬಿಜೆಪಿ ಈಗಾಗಲೇ ರಾಜ್ಯದ ಮುಖ್ಯ ಚುನಾವಣಾಧಿಕಾರಿಗೆ ಈ ಬಗ್ಗೆ ದೂರು ನೀಡಿದ್ದು, ಸೋಮವಾರ ದೆಹಲಿಯಲ್ಲಿ ಎನ್‌ಡಿಎ ನಾಯಕರು ಕೇಂದ್ರ ಚುನಾವಣಾ ಆಯುಕ್ತರಿಗೆ ದೂರು ನೀಡುವರು.

ರಾಜ್ಯದ ರಾಮನಗರ ಯಶವಂತಪುರ ಮತ್ತಿತರರ ಕಡೆ ಎಸ್‌ಐಆರ್‌ನಲ್ಲಿ ಅಕ್ರಮ ಬಗ್ಗೆ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಸುದ್ದಿಗೋಷ್ಠಿ ನಡೆಸಿ, ಅಕ್ರಮಗಳು ನಡೆಯುತ್ತಿವೆ ಎಂಬುದನ್ನು ದಾಖಲೆಗಳ ಸಮೇತ ಮಾಹಿತಿ ನೀಡಿದ್ದರು.

### ಆರೋಗ್ಯಕರ ಜೀವನಶೈಲಿ ಅಳವಡಿಸಿಕೊಳ್ಳುವಂತೆ ಶಂಭುನಾಥಶ್ರೀ ಕರೆ

## ಫಿಟ್ ಹಾಸನ್ ಮ್ಯಾರಥಾನ್‌ಗೆ ಉತ್ಸಾಹದ ಸ್ಪಂದನೆ

• ಪ್ರಜೋದಯ ವರದಿ

**ಹಾಸನ:** ಆರೋಗ್ಯಕರ ಜೀವನ ಶೈಲಿ, ದೈಹಿಕ ಸದೃಢತೆ ಹಾಗು ಪರಿಸರ ಜಾಗೃತಿಯನ್ನು ಸಮಾಜದಲ್ಲಿ ಬೆಳೆಸುವ ಉದ್ದೇಶದಿಂದ ಕುವೆಂಪು ಯುವಕರ ಸಂಘ ವತಿಯಿಂದ ಭಾನುವಾರ ಆಯೋಜಿಸಿದ್ದ ಫಿಟ್ ಹಾಸನ್ ಮ್ಯಾರಥಾನ್ ನಮ್ಮ ನಡೆ... ಆರೋಗ್ಯದ ಕಡೆ ಕಾರ್ಯಕ್ರಮಕ್ಕೆ ಸಾರ್ವಜನಿಕರಿಂದ ಉತ್ಸಾಹಭರಿತ ಸ್ಪಂದನೆ ವ್ಯಕ್ತವಾಯಿತು.

ನಗರದ ಆದಿಚುಂಚನಗಿರಿ ಶಾಖಾ ಮಠದ ಎದುರು ನಡೆದ ಕಾರ್ಯಕ್ರಮಕ್ಕೆ ಶ್ರೀ ಶಂಭುನಾಥ ಸ್ವಾಮೀಜಿ ಹಾಗು ಶಾಸಕ ಹೆಚ್.ಪಿ.ಸ್ವರೂಪ್ ಅವರು ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿದರು.

ಶ್ರೀ ಶಂಭುನಾಥ ಸ್ವಾಮೀಜಿ ಅವರು ಮಾತನಾಡಿ, ಆರೋಗ್ಯವೇ ಮನುಷ್ಯನ ಅತ್ಯಮೂಲ್ಯ ಸಂಪತ್ತು.



ಉತ್ತಮ ಆರೋಗ್ಯಕ್ಕಾಗಿ ಪ್ರತಿಯೊಬ್ಬರೂ ನಿಯಮಿತ ವ್ಯಾಯಾಮ, ಯೋಗ, ಶಿಸ್ತುಬದ್ಧ ಜೀವನ ಹಾಗು ಪ್ರಕೃತಿ ಸ್ನೇಹಿ ಜೀವನ ಶೈಲಿಯನ್ನು ಅಳವಡಿಸಿಕೊಳ್ಳಬೇಕು. ಯುವ ಜನರಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಇಂತಹ ಕಾರ್ಯಕ್ರಮಗಳು ಸಮಾಜಕ್ಕೆ ಮಾದರಿ ಎಂದು ಆಶಿಸಿದರು.

ಶಾಸಕ ಹೆಚ್.ಪಿ.ಸ್ವರೂಪ್ ಅವರು ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಯುವಜನರಲ್ಲಿ ಹೃದಯಾಘಾತ ಸೇರಿ ಜೀವನ ಶೈಲಿಗೆ ಸಂಬಂಧಿಸಿದ ಕಾಯಿಲೆಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆ. ಅನಿಯಮಿತ ಆಹಾರ ಪದ್ಧತಿ, ಮಾನಸಿಕ ಒತ್ತಡ, ದೈಹಿಕ ಚಟುವಟಿಕೆಯ ಕೊರತೆ, ಧೂಮಪಾನ, ಮದ್ಯಪಾನ ಸೇರಿ ದುಶ್ಚಟಗಳು ಹಾಗು ಪರಿಸರ ಮಾಲಿನ್ಯ ಆರೋಗ್ಯದ ಮೇಲೆ

» ನಾಲ್ಕನೇ ಪುಟದಲ್ಲಿ

# ಮಳೆಗೆ ತಡೆಗೋಡೆ ಕುಸಿತ: ಎರಡು ಮನೆಗಳಿಗೆ ಹಾನಿ

## ಪವಾಡಸದೃಶವಾಗಿ ಕುಟುಂಬಸ್ಥರು ಪಾರು | ಕೂದಲೆಳೆ ಅಂತರದಲ್ಲಿ ತಪ್ಪಿದ ಅನಾಹುತ

• ಪ್ರಜೋದಯ ವರದಿ

**ಸಕಲೇಶಪುರ:** ಜಡಿ ಮಳೆ ಹಾಗು ಬಿರುಗಾಳಿಯ ಅಬ್ಬರಕ್ಕೆ ಬೃಹತ್ ತಡೆಗೋಡೆಯೊಂದು ಕುಸಿದು ಎರಡು ವಾಸದ ಮನೆಗಳು ಜಖಂಗೊಂಡ ಘಟನೆ ಪಟ್ಟಣದ ಅರೇಹಳ್ಳಿ ಬೀದಿಯ ಡಾಲರ್ಸ್ ಕಾಲೋನಿಯಲ್ಲಿ ಶನಿವಾರ ತಡರಾತ್ರಿ ನಡೆದಿದೆ. ಮನೆಗಳಲ್ಲಿ ಮಲಗಿದ್ದ ಕುಟುಂಬಸ್ಥರು ಪವಾಡದ ರೀತಿಯಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಪಟ್ಟಣದ ಡಾಲರ್ಸ್ ಕಾಲೋನಿಯಲ್ಲಿ ರೈಟ್ ಡೆವಲಪರ್ಸ್ ವತಿಯಿಂದ ನೂತನ ಬಡಾವಣೆ ನಿರ್ಮಾಣ ಕಾಮಗಾರಿ ನಡೆಯು ತ್ತಿದ್ದು, ಮಣ್ಣು ಕುಸಿಯದಂತೆ ಸುಮಾರು 25 ಅಡಿ ಎತ್ತರ ಹಾಗು 150 ಮೀಟರ್ ಉದ್ದದ ತಡೆಗೋಡೆ ನಿರ್ಮಿಸಲಾಗಿತ್ತು. ಕಾಮಗಾರಿ ಪೂರ್ಣಗೊಳ್ಳದಿರುವ ಸಂದರ್ಭದಲ್ಲೇ ಕಳೆದ ಎರಡು ದಿನಗಳಿಂದ ಸುರಿಯುತ್ತಿರುವ ಮಳೆ ಹಾಗು ಭಾರೀ ಬಿರುಗಾಳಿಯ ಪರಿಣಾಮ ತಡರಾತ್ರಿ ತಡೆಗೋಡೆಯ ಒಂದು ಭಾಗ ಏಕಾಏಕಿ ಕುಸಿದಿದೆ.



ತಡೆಗೋಡೆಯ ಸಮೀಪದಲ್ಲಿದ್ದ ಮಧುಕುಮಾರ್ ಹಾಗು ಅಬ್ದುಲ್ ಮುನಾಫ್ ಅವರ ಮನೆಗಳ ಮೇಲೆ ಬಿದ್ದ ಗೋಡೆ ಬಿದ್ದ ಪರಿಣಾಮ ಎರಡೂ ಮನೆಗಳಿಗೆ ಹಾನಿಯಾಗಿದೆ. ಮನೆಯ ಗೋಡೆಗಳು ಹಾಗು ಮೇಲ್ಛಾವಣಿ ಜಖಂಗೊಂಡಿದ್ದು, ಮನೆಯಳೊಗಿದ್ದ ಗೃಹೋಪಯೋಗಿ ವಸ್ತುಗಳು ಹಾನಿಗೊಳಗಾಗಿವೆ. ಘಟನೆಯ ಸಮಯದಲ್ಲಿ ಕುಟುಂಬಸ್ಥರು ಮನೆಯೊಳಗೆ ಮಲಗಿದ್ದರೂ ಅದೃಷ್ಟವಶಾತ್ ಪ್ರಾಣಹಾನಿ ಸಂಭವಿಸಿಲ್ಲ. ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆಯೇ ಸ್ಥಳೀಯರು ನೆರವಿಗೆ ಧಾವಿಸಿದರು. ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿದರು.

> "ತಡೆಗೋಡೆ ಕುಸಿತದಿಂದ ಮನೆಯೊಳಗೆ ಮಲಗಿದ್ದವರು ಪವಾಡದ ರೀತಿಯಲ್ಲಿ ಪಾರಾಗಿದ್ದಾರೆ. ಲೇಔಟ್ ಮಾಲೀಕರನ್ನು ಕರೆಸಿ ಹಾನಿಗೊಳಗಾದ ಮನೆಗಳ ದುರಸ್ತಿಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗುವುದು. ಮನೆಗಳಿಗೆ ಉಂಟಾಗಿರುವ ಹಾನಿಗೆ ಸೂಕ್ತ ಪರಿಹಾರ ಒದಗಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಲಾಗುವುದು.
> -ಸಿಮೆಂಟ್ ಮಂಜು, ಶಾಸಕ

**ಶಾಸಕ, ತಹಶೀಲ್ದಾರ್ ಸ್ಥಳ ಪರಿಶೀಲನೆ**

ಘಟನೆಯ ಬಳಿಕ ಭಾನುವಾರ ಬೆಳಿಗ್ಗೆ ಶಾಸಕ ಸಿಮೆಂಟ್ ಮಂಜು ಹಾಗು ತಹಶೀಲ್ದಾರ್ ಸುಪ್ರೀತಾ ಅವರು ಸ್ಥಳಕ್ಕೆ ಭೇಟಿ ನೀಡಿ ಹಾನಿಗೊಳಗಾದ ಮನೆಗಳನ್ನು ಪರಿಶೀಲಿಸಿ, ಎರಡು ಕುಟುಂಬಗಳ ಸದಸ್ಯರಿಂದ ಘಟನೆ ಕುರಿತು ಮಾಹಿತಿ ಪಡೆದರು.

ಈ ಸಂದರ್ಭದಲ್ಲಿ ಮಾತನಾಡಿದ ಶಾಸಕ ಸಿಮೆಂಟ್ ಮಂಜು ಅವರು,

» ನಾಲ್ಕನೇ ಪುಟದಿಂದ

# ದೇವಾಲಯಗಳು ಸಮಾಜದ ಶಕ್ತಿ ಕೇಂದ್ರಗಳಾಗಲಿ

### ಹರಿಹರಪುರ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅಭಿಮತ

• ಪ್ರಜೋದಯ ವರದಿ

**ಅರಸೀಕೆರೆ :** ಭಾರತೀಯ ಸನಾತನ ಸಂಸ್ಕೃತಿ ಮತ್ತು ಸಂಸ್ಕಾರದಲ್ಲಿ ದೇವಾಲಯಗಳಿಗೆ ವಿಶೇಷ ಸ್ಥಾನವಿದೆ. ಹಿರಿಯರು ನಿರ್ಮಿಸಿ ಕಾಲಕ್ರಮೇಣ ಶಿಥಿಲಗೊಂಡಿರುವ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡುವುದು ಪುಣ್ಯದ ಕಾರ್ಯವಾಗಿದೆ ಎಂದು ಹರಿಹರಪುರದ ಶ್ರೀ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ ಅವರು ಹೇಳಿದರು.

ತಾಲ್ಲೂಕಿನ ಕಣಕಟ್ಟೆ ಗ್ರಾಮದಲ್ಲಿ ಶ್ರೀ ಕಮಟೇಶ್ವರ ಸ್ವಾಮಿ ಪುನಃ ಪ್ರತಿಷ್ಠಾಪನೆ ಹಾಗು ನೂತನ ಶಿಲಾಮಯ ದೇವಾಲಯದ ಲೋಕಾರ್ಪಣೆ ಅಂಗವಾಗಿ ಆಯೋಜಿಸಿದ್ದ ಧಾರ್ಮಿಕ ಸಭೆಯಲ್ಲಿ ಸಾನಿಧ್ಯ ವಹಿಸಿ ಮಾತನಾಡಿದ ಅವರು, ಪ್ರಕೃತಿಯು ಮಾನವನಿಗೆ ಎಲ್ಲವನ್ನೂ ನೀಡಿದ್ದರೂ, ಇಂದಿನ ಜೀವನಶೈಲಿಯಲ್ಲಿ ಮಾನವ ಪ್ರಕೃತಿಯಿಂದ ದೂರವಾಗುತ್ತಿದ್ದಾನೆ.



ಸನಾತನ ಸಂಸ್ಕೃತಿಯಲ್ಲಿ ಪ್ರಕೃತಿಯೊಂದಿಗೆ ಬೆಸೆದುಕೊಂಡ ಧಾರ್ಮಿಕ ಶ್ರದ್ಧಾ ಕೇಂದ್ರಗಳಾಗಿ ದೇವಾಲಯಗಳನ್ನು ನಿರ್ಮಿಸಲಾಗಿದೆ ಎಂದರು.

ದೇವಾಲಯಗಳು ಊರಿನ ಹೆಬ್ಬಾಗಿಲಿನ ಭೂಷಣವಾಗಿ ಗ್ರಾಮದ ಸುಭಿಕ್ಷತೆಗೆ ಕಾರಣವಾಗುತ್ತವೆ. ಇವು ಕೇವಲ ಆರಾಧನಾ ಕೇಂದ್ರಗಳಲ್ಲ, ದೈಹಿಕ ಹಾಗು ಮಾನಸಿಕ ನೆಮ್ಮದಿಯನ್ನು ನೀಡುವ ಶಕ್ತಿಕೇಂದ್ರಗಳಾಗಿದ್ದು, ಸಮಾಜವನ್ನು ಒಗ್ಗೂಡಿಸುವ ಕಾರ್ಯವನ್ನೂ ನಿರ್ವಹಿಸುತ್ತವೆ. ಆದ್ದರಿಂದ ಇಂತಹ ಪವಿತ್ರ ಕ್ಷೇತ್ರಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಕೊಡುಗೆಯಾಗಿ ನೀಡಬೇಕು ಎಂದು ಕರೆ ನೀಡಿದರು.

ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಅವರ

» ನಾಲ್ಕನೇ ಪುಟದಲ್ಲಿ

## ಜಾರ್ಖಂಡ್‌ನಲ್ಲಿ ಅಪಘಾತ: ಹೊಳೆನರಸೀಪುರ ಚಾಲಕ ಸಾವು



**ಹಾಸನ:** ಜಾರ್ಖಂಡ್ ರಾಜದಲ್ಲಿ ಲಿಫ್ಟ್ ನಿರ್ಮಾಣ ಸಾಮಾಗ್ರಿಗಳನ್ನು ಸಾಗಿಸುತ್ತಿದ್ದ ಲಾರಿಯೊಂದು ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದ ಪರಿಣಾಮ ಹೊಳೆನರಸೀಪುರ ಮೂಲದ ಯುವ ಚಾಲಕ ಮೃತಪಟ್ಟಿದ್ದಾನೆ. ಹೊಳೆನರಸೀಪುರ ನಿವಾಸಿ ಯಶವಂತ್ (21) ಮೃತ.

ಯಶವಂತ್ ಅವರು ಬೆಂಗಳೂರಿನಿಂದ ಜಾರ್ಖಂಡ್‌ಗೆ ಲಿಫ್ಟ್ ನಿರ್ಮಾಣಕ್ಕೆ ಬಳಸುವ ಸಾಮಾಗ್ರಿಗಳನ್ನು ಲಾರಿಯಲ್ಲಿ ಸಾಗಿಸುತ್ತಿದ್ದರು. ಜಾರ್ಖಂಡ್ ತಲುಪುವ ಮುನ್ನ ಮಾರ್ಗ ಮಧ್ಯೆ ಲಾರಿಯು ಏಕಾಏಕಿ ನಿಯಂತ್ರಣ ತಪ್ಪಿ ರಸ್ತೆ ಬದಿಯ ಮರಕ್ಕೆ ಭೀಕರವಾಗಿ ಡಿಕ್ಕಿ ಹೊಡೆದಿದೆ. ಅಪಘಾತದ ತೀವ್ರತೆಗೆ ಲಾರಿಯ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದ್ದು, ಯಶವಂತ್ ಸ್ಥಳದಲ್ಲೇ ಮೃತಪಟ್ಟಿದ್ದಾನೆಂದು ತಿಳಿದುಬಂದಿದೆ.

## ಎಸ್‌ಐಆರ್ ಪ್ರಕ್ರಿಯೆ ವೇಳೆ ಶಿಕ್ಷಕಿ ಅಸ್ವಸ್ಥ

• ಪ್ರಜೋದಯ ವರದಿ

**ಬೇಲೂರು:** ವಿಶೇಷ ಮತದಾರರ ಪರಿಷ್ಕರಣೆ (ಎಸ್‌ಐಆರ್) ಕಾರ್ಯದಲ್ಲಿ ತೊಡಗಿದ್ದ ವೇಳೆ ಶಿಕ್ಷಕಿಯೊಬ್ಬರು ಅಸ್ವಸ್ಥಗೊಂಡು ಕುಸಿದು ಬಿದ್ದ ಘಟನೆ ಪಟ್ಟಣದ ಚನ್ನೇಗೌಡರ ಬೀದಿಯಲ್ಲಿ ಭಾನುವಾರ ನಡೆದಿದೆ. ಪಾರ್ವತಿ ಅಸ್ವಸ್ಥಗೊಂಡ ಶಿಕ್ಷಕಿ.



ಶಿಕ್ಷಕಿ ಮನೆ ಮನೆಗೆ ತೆರಳಿ ಮತದಾರರ ಮಾಹಿತಿ ಪರಿಷ್ಕರಣೆ ಕಾರ್ಯದಲ್ಲಿ ತೊಡಗಿದ್ದ ವೇಳೆ ಏಕಾಏಕಿ ಕುಸಿದು ಬಿದ್ದಿದ್ದಾರೆ. ಸ್ಥಳದಲ್ಲಿದ್ದವರು ಅವರನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಶಿಕ್ಷಕಿ ಪಾರ್ವತಿ ಅವರು ಅನಾರೋಗ್ಯದ ನಡುವೆಯೂ ಕರ್ತವ್ಯಕ್ಕೆ ನಿಯೋಜಿಸಿರುವುದೇ ಘಟನೆಗೆ ಕಾರಣವೆಂದು ತಿಳಿದು ಬಂದಿದೆ.

ನಾನು ಈಗಾಗಲೇ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದೇನೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವಿ ಸಲ್ಲಿಸಿ, ಈ ಕರ್ತವ್ಯ ನಿರ್ವ ಹಿಸಲು ಸಾಧ್ಯವಿಲ್ಲ ವೆಂದು ತಿಳಿಸಿದ್ದೆ. ಆದರೆ, ನನ್ನ ಮನವಿಗೆ ಸ್ಪಂದನೆ ದೊರೆಯಲಿಲ್ಲ. ಭಾನುವಾರವೂ ಕರ್ತವ್ಯ ನಿರ್ವಹಿಸುವಂತೆ ಸೂಚನೆ ನೀಡಲಾ ಯಿತು. ಕೆಲವೇ ತಿಂಗಳಲ್ಲಿ ನಾನು ನಿವೃತ್ತಿ ಯಾಗಲಿ ದ್ದರೂ ಕೆಲಸದ ಒತ್ತಡ ಕಡಿಮೆಯಾಗಲಿಲ್ಲ. ವೈದ್ಯರು ಒಂದು ವಾರ ಸಂಪೂರ್ಣ ವಿಶ್ರಾಂತಿ ಪಡೆಯುವಂತೆ ಹೇಳಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಎಸ್‌ಐಆರ್ ಕಾರ್ಯದಲ್ಲಿ ಹೇಗೆ ಭಾಗವಹಿಸಲಿ ಎಂದು ಕಣ್ಣೀರಿಟ್ಟಿದ್ದಾರೆ.

## ಹುಚ್ಚುನಾಯಿ ದಾಳಿ: ಒಂದೇ ದಿನ ಆರು ಮಂದಿಗೆ ಗಾಯ

ಅಗ್ಗುಂದ : ಸಮೀಪದ ಜೆ.ಸಿ.ಪುರ ಗ್ರಾಮದಲ್ಲಿ ಹುಚ್ಚುನಾಯಿ ದಾಳಿ ನಡೆಸಿ ಒಂದೇ ದಿನ ಆರು ಮಂದಿಗೆ ಗಾಯಗೊಳಿಸಿದ ಘಟನೆ ಗ್ರಾಮಸ್ಥರಲ್ಲಿ ಆತಂಕ ಮೂಡಿಸಿದೆ. ಸಂಬಂಧಪಟ್ಟ ಇಲಾಖೆಗಳು ಕೂಡಲೇ ಶಾಶ್ವತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಶ್ರೀನಿವಾಸಮೂರ್ತಿ, ಗಿರೀಶ್, ವಿಜಯ್, ಲಕ್ಷ್ಮಿ, ಲಿಂಗರಾಜು ಹಾಗು ರೆಹಮತುಲ್ಲಾ ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ಜೆ.ಸಿ.ಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಲಾಗಿದ್ದು, ಆ್ಯಂಟಿ-ರೇಬಿಸ್ ಲಸಿಕೆ ಹಾಗು ಅಗತ್ಯ ಚಿಕಿತ್ಸೆ ನೀಡಿದ್ದಾರೆ.

ಏಕಾಏಕಿ ದಾಳಿ ನಡೆಸಿದ ನಾಯಿಯು ರಸ್ತೆಯಲ್ಲಿ ಸಂಚರಿಸುತ್ತಿದ್ದ ಹಲವರನ್ನು ಬೆನ್ನಟ್ಟಿದ ಪರಿಣಾಮ ಆತಂಕಗೊಂಡ ಗ್ರಾಮಸ್ಥರು ಸುರಕ್ಷತೆಯ ದೃಷ್ಟಿಯಿಂದ ನಾಯಿಯನ್ನು ಕೊಂದಿದ್ದಾರೆ. ಈ ಹಿಂದೆಯೂ ನಾಯಿ ದಾಳಿ ನಡೆದ ಘಟನೆಗಳು ವರದಿಯಾಗಿವೆ. ಆದರೂ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಸಂಬಂಧಪಟ್ಟ ಇಲಾಖೆಗಳು ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ ಎಂಬ ಆರೋಪಿಸಿದರು.

ಗ್ರಾಮ ಪಂಚಾಯಿತಿ ಹಾಗು ಪಶುಸಂಗೋಪನಾ ಇಲಾಖೆ ಸಮನ್ವಯದಿಂದ ಬೀದಿನಾಯಿಗಳ ಸಂತಾನ ನಿಯಂತ್ರಣ (ಎಬಿಸಿ) ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು. ಸಾರ್ವಜನಿಕರ ಸುರಕ್ಷತೆಗೆ ಅಗತ್ಯ ಕ್ರಮಗಳನ್ನು ತಕ್ಷಣ ಕೈಗೊಳ್ಳಬೇಕೆಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

### ಸಿಎಂ ಭರವಸೆಯಿಂದ ಮತ್ತೆ ಚಿಗುರಿದ ಆಶಾಭಾವನೆ | ಎರಡು ದಶಕಗಳ ಸಮಸ್ಯೆಗೆ ಬೇಕಿದೆ ತುರ್ತು ಪರಿಹಾರ


# ಐಐಟಿಗೆ ಭೂಮಿ ಕೊಟ್ಟ ರೈತರಿಗೆ ಸಿಗದ ನ್ಯಾಯ

-ಕೆ.ಪಿ.ಸಾಗರ್ ರಾಜು

• ಪ್ರಜೋದಯ ವರದಿ

**ಹಾಸನ:** ನಗರದ ಹೊರವಲಯದಲ್ಲಿ ಭಾರತೀಯ ತಂತ್ರಜ್ಞಾನ ಸಂಸ್ಥೆ (ಐಐಟಿ) ಸ್ಥಾಪನೆಗಾಗಿ ಎರಡು ದಶಕಗಳ ಹಿಂದೆ ಫಲವತ್ತಾದ ಕೃಷಿ ಭೂಮಿಯನ್ನು ಬಿಟ್ಟುಕೊಟ್ಟ ನೂರಾರು ರೈತರ ಹೋರಾಟ ಮಾತ್ರ ಇನ್ನೂ ಅಂತ್ಯ ಕಂಡಿಲ್ಲ. ಭೂಮಿ ಹೋಯಿತು, ಐಐಟಿ ಬರಲಿಲ್ಲ, ನ್ಯಾಯಾಲಯದ ಆದೇಶದಂತೆ ಸಿಗಬೇಕಿದ್ದ ನಿವೇಶನವೂ ಕೈ ಸೇರಲಿಲ್ಲವೆಂಬ ನೋವಿನ ನಡುವೆ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೀಡಿರುವ ಭರವಸೆ ರೈತರಲ್ಲಿ ಹೊಸ ನಿರೀಕ್ಷೆ ಮೂಡಿಸಿದೆ.

2006ರಲ್ಲಿ ಆಗಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಅವಧಿಯಲ್ಲಿ ಹಾಸನದ ಹೊರವಲಯದಲ್ಲಿ ಐಐಟಿ ಸ್ಥಾಪನೆ ಉದ್ದೇಶದಿಂದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಗವೇನಹಳ್ಳಿ, ರಾಜಘಟ್ಟ, ಆಡುವಳ್ಳಿ, ಹೊನ್ನೇನಹಳ್ಳಿ, ದೊಡ್ಡಬಸವನಹಳ್ಳಿ, ಬುಸ್ತೇನಹಳ್ಳಿ ಸೇರಿ ಏಳು ಗ್ರಾಮಗಳ ವ್ಯಾಪ್ತಿಯ 1,057 ಎಕರೆ 24 ಗುಂಟೆ ಫಲವತ್ತಾದ ಕೃಷಿ ಭೂಮಿಯನ್ನು ಸ್ವಾಧೀನ ಪಡಿಸಿಕೊಂಡಿತ್ತು. ಈ ಪೈಕಿ ಸುಮಾರು 334 ಎಕರೆ ಭೂಮಿಯನ್ನು ಐಐಟಿಗಾಗಿ ಮೀಸಲಿಡಲಾಗಿತ್ತು.



ಭೂಸ್ವಾಧೀನ ಪ್ರಕ್ರಿಯೆ ಆರಂಭವಾದಾಗ ಕೆಲ ರೈತರು ಸರ್ಕಾರ ನಿಗದಿಪಡಿಸಿದ್ದ ನಗದು ಪರಿಹಾರವನ್ನು ಸ್ವೀಕರಿಸಿದರು. ಒಂದು ಎಕರೆಗೆ ಸುಮಾರು 20 ರಿಂದ 25 ಲಕ್ಷದವರೆಗೆ ಪರಿಹಾರ ಪಡೆದು 450ಕ್ಕೂ ಹೆಚ್ಚು ರೈತರು ಪ್ರಕರಣವನ್ನು ಮುಕ್ತಾಯಗೊಳಿಸಿದ್ದರು. ಆದರೆ, ಉಳಿದ 450ಕ್ಕೂ ಹೆಚ್ಚು ರೈತರು ನಗದು ಪರಿಹಾರಕ್ಕಿಂತ ಅಭಿವೃದ್ಧಿ ಪಡಿಸಿದ ನಿವೇಶನವೇ ನ್ಯಾಯಸಮ್ಮತ ಪರಿಹಾರವೆಂದು ಒತ್ತಾಯಿಸಿ ಹೋರಾಟ ಆರಂಭಿಸಿದರು.

ಈ ಹೋರಾಟ ಆಡಳಿತಾತ್ಮಕ ಹಂತದಿಂದ ನ್ಯಾಯಾಲಯದ ಮೆಟ್ಟಿಲೇರಿತು. ಸುದೀರ್ಘ ವಿಚಾರಣೆಯ ಬಳಿಕ ಹೈಕೋರ್ಟ್, ಭೂಮಿ ಕಳೆದುಕೊಂಡ ಅರ್ಹ ರೈತರಿಗೆ ಪ್ರತಿ ಎಕರೆಗೆ 10,771 ಚದರ ಅಡಿ ಅಭಿವೃದ್ಧಿ ಪಡಿಸಿದ ನಿವೇಶನ ನೀಡುವಂತೆ ಆದೇಶ ನೀಡಿತು. ಆದರೆ, ನ್ಯಾಯಾಲಯದ ಆದೇಶ ಹೊರಬಿದ್ದ ಬಳಿಕವೂ ಕೆಐಎಡಿಬಿ ಇದುವರೆಗೆ ನಿವೇಶನ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳಿಸಿಲ್ಲವೆಂದು ರೈತರು ಆರೋಪಿಸುತ್ತಿದ್ದಾರೆ.

### ರೈತರ ಬದುಕು ಅತಂತ್ರ

ಐಐಟಿ ಸ್ಥಾಪನೆ ಹೆಸರಿನಲ್ಲಿ ಭೂಮಿ ಸ್ವಾಧೀನಪಡಿಸಿ ಕೊಂಡರೂ, ಹಾಸನದಲ್ಲಿ ಐಐಟಿ ಸ್ಥಾಪನೆಯಾಗಲಿಲ್ಲ. ಯೋಜನೆ ಬೇರೆಡೆಗೆ ಸ್ಥಳಾಂತರಗೊಂಡ ನಂತರವೂ ಭೂಮಿ ಕಳೆದುಕೊಂಡ ರೈತರಿಗೆ ಪರ್ಯಾಯ ನ್ಯಾಯ ಒದಗಿಸುವ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ಅಭಿವೃದ್ಧಿ ಯೋಜನೆಗಳು ಸಾರ್ವಜನಿಕ ಹಿತದೃಷ್ಟಿಯಿಂದ ಅಗತ್ಯವೇ ಆಗಿದ್ದರೂ, ಅದರ ಭಾರವನ್ನು ಹೊತ್ತ ರೈತರಿಗೆ ಕಾನೂನುಬದ್ಧ ಪರಿಹಾರವನ್ನು ಕಾಲಮಿತಿಯೊಳಗೆ ನೀಡುವುದು ಸರ್ಕಾರದ ಹೊಣೆಗಾರಿಕೆ ಎಂದು ರೈತರು ಆಗ್ರಹಿಸಿದ್ದಾರೆ.

### ಕೆಐಎಡಿಬಿ ವಿರುದ್ಧ ಆರೋಪ

ನ್ಯಾಯಾಲಯದ ಸ್ಪಷ್ಟ ಆದೇಶವಿದ್ದರೂ ಕೆಐಎಡಿಬಿ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ವಿಳಂಬ ಮಾಡುತ್ತಿದ್ದಾರೆ. ದಾಖಲೆಗಳ ಹೆಸರಿನಲ್ಲಿ ರೈತರನ್ನು ಬೆಂಗಳೂರು ಮತ್ತು ಮೈಸೂರಿನ ಕಚೇರಿಗಳಿಗೆ ಅಲೆದಾಡಿಸಲಾಗುತ್ತಿದ್ದು, ಅಂತಿಮ ತೀರ್ಮಾನ ಕೈಗೊಳ್ಳಲಾಗುತ್ತಿಲ್ಲ. ಪರಿಹಾರ ಪ್ರಕ್ರಿಯೆ ವಿಳಂಬವಾಗುತ್ತಿರುವುದರಿಂದ ಭೂಮಿ ಕಳೆದು ಕೊಂಡ ಕುಟುಂಬಗಳ ಆರ್ಥಿಕ ಹಾಗೂ ಸಾಮಾಜಿಕ ಸ್ಥಿತಿ ಹದಗೆಟ್ಟಿದ್ದು, ಯುವ ಪೀಳಿಗೆಯ ಭವಿಷ್ಯದ ಮೇಲೂ ಪರಿಣಾಮ ಬೀರಿದೆ ಎಂದು ರೈತರು ಹೇಳುತ್ತಾರೆ.

**ಭೂಮಿ ಹೋಯಿತು, ಪರಿಹಾರವೂ ಇಲ್ಲ**


ಪರಿಹಾರ ಪಡೆಯದೆ ಉಳಿದ ರೈತರ ಸಂಕಷ್ಟ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಭೂಮಿ ಸ್ವಾಧೀನಗೊಂಡ ಬಳಿಕ ಪಹಣಿಗಳಲ್ಲಿ ಕೆಐಎಡಿಬಿ ಹೆಸರೇ ದಾಖಲಾಗಿರುವುದರಿಂದ ರೈತರಿಗೆ ಆ ಜಮೀನಿನ ಮೇಲೆ ಯಾವುದೇ ಹಣಕಾಸಿನ ವ್ಯವಹಾರ ನಡೆಸಲು ಸಾಧ್ಯವಾಗುತ್ತಿಲ್ಲ.

ಮಕ್ಕಳ ಉನ್ನತ ಶಿಕ್ಷಣ, ಮದುವೆ, ಕೃಷಿ ಅಥವಾ ತುರ್ತು ಚಿಕಿತ್ಸೆಗೆ ಬ್ಯಾಂಕ್‌ಗಳಲ್ಲಿ ಸಾಲ ಪಡೆಯಲು ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿದೆ. ಕೃಷಿ ಮಾಡುವ ಹಕ್ಕು ಕೂಡ ಸೀಮಿತವಾಗಿದ್ದು, ಹಲವು ಕುಟುಂಬಗಳು ಕೇವಲ ಬದುಕು ಸಾಗಿಸುವಷ್ಟರ ಮಟ್ಟಿಗೆ ಕೃಷಿ ಮಾಡಿಕೊಂಡು ಜೀವನ ನಿರ್ವಹಿಸುತ್ತಿವೆ. ಕಳೆದ 20 ವರ್ಷಗಳಲ್ಲಿ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರ, ಕಾಂಗ್ರೆಸ್ ಹಾಗು ಬಿಜೆಪಿ ಸರ್ಕಾರಗಳು ಅಧಿಕಾರಕ್ಕೆ ಬಂದರೂ ನ್ಯಾಯಾಲಯದ ಆದೇಶ ಜಾರಿಗೆ ಯಾವುದೇ ಸರ್ಕಾರವೂ ಪರಿಣಾಮಕಾರಿ ಕ್ರಮ ಕೈಗೊಂಡಿಲ್ಲ.

**ಸಿಎಂ ಭೇಟಿ ಬಳಿಕ ಮೂಡಿದ ಹೊಸ ಭರವಸೆ**

ಕಳೆದ ವಾರ ಪರಿಹಾರ ಸಿಗದ ರೈತರ ನಿಯೋಗವು ವಿಧಾನಸೌಧದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು


» ನಾಲ್ಕನೇ ಪುಟದಲ್ಲಿ



# ಭಾವ ಲಹರಿ

## ಖಾಲಿ ಹೊಟ್ಟೆಯಲ್ಲಿ ತುಪ್ಪ ತಿಂದರೆ ಏನಾಗುತ್ತದೆ ಗೊತ್ತೇ?

**ತುಪ್ಪದ ಬಗ್ಗೆ ಇರುವ ಮಹತ್ವ ತಿಳಿಯಿರಿ.**



ಒಂದು ನಿಮಿಷ ಸುಮ್ಮನೆ ಕುಳಿತುಕೊಳ್ಳಿ. ಜೊತೆಗೆ ಮುಂಜಾನೆ ಎದ್ದ ತಕ್ಷಣ ಏನು ಮಾಡುತ್ತೀರಾ?ಎನ್ನುವುದನ್ನು ಮೆಲುಕುಹಾಕಿ. ಸಾಮಾನ್ಯವಾಗಿ ಎಲ್ಲರ ಉತ್ತರ ಒಂದೇ ಆಗಿರಬಹುದು. ನೀರು ಕುಡಿಯುತ್ತೇವೆ, ಹಲ್ಲುಜ್ಜು ತ್ತೇವೆ, ವ್ಯಾಯಾಮ ಮಾಡುತ್ತೇವೆ ಎನ್ನುವುದಾ ಗಿರಬಹುದು.

ಅದೇ ಯಾರಾದರೂ ತುಪ್ಪವನ್ನು ತಿನ್ನುತ್ತೇವೆ ಎಂದರೆ ನಿಮ್ಮ ಪ್ರತಿಕ್ರಿಯೆ ಹೇಗಿರಬಹುದು? ತುಪ್ಪ ಎಂದರೆ ಸಾಮಾನ್ಯವಾಗಿ ಎಲ್ಲರ ಮನಸ್ಸಿಗೆ ಬರುವುದು. ಜಿಡ್ಡಿನ ಪದಾರ್ಥ, ಅತಿಯಾದ ಕೊಬ್ಬನ್ನು ಹೊಂದಿರುತ್ತದೆ, ಅದನ್ನು ಮಿತವಾಗಿ ಸೇವಿಸಬೇಕು, ಅತಿಯಾಗಿ ತಿಂದರೆ ಆರೋಗ್ಯ ಹಾಳಾಗುವುದು, ತೂಕ ಹೆಚ್ಚುವುದು ಸೇರಿದಂತೆ ಇನ್ನಿತರ ವಿಚಾರ ಮನಸ್ಸಿಗೆ ಬರಬಹುದು ಅಲ್ಲವೇ?

ಬರೀ ಒಂದೆರಡು ಚಮಚ ತುಪ್ಪದಲ್ಲಿದೆ ಹತ್ತಾರು ಲಾಭ ಆದರೆ ಈ ಲೇಖನದಲ್ಲಿ ತುಪ್ಪ ತಿಂದರೆ ಯಾವೆಲ್ಲಾ ರೋಗವನ್ನು ನಿವಾರಿಸಬಹುದು ಎನ್ನುವ ವಿವರಣೆಯನ್ನು ನೀಡಲಾಗಿದೆ. ಹೌದು, ತುಪ್ಪ ಎಂದರೆ ಅದು ಕೇವಲ ಕೊಬ್ಬಿನ ಪದಾರ್ಥ ಎನ್ನುವುದಕ್ಕೆ ಸೀಮಿತವಾಗಿಲ್ಲ. ಆಯುರ್ವೇದದಲ್ಲಿ ತುಪ್ಪಕ್ಕೆ ವಿಶೇಷವಾದ ಸ್ಥಾನವನ್ನು ನೀಡಲಾಗಿದೆ.

ಅಲ್ಲದೆ ಅದೊಂದು ಔಷಧೀಯ ಪದಾರ್ಥವೂ ಹೌದು. ನಿತ್ಯ ಖಾಲಿ ಹೊಟ್ಟೆಯಲ್ಲಿ ತುಪ್ಪವನ್ನು ತಿಂದರೆ ನಾವು ಊಹಿಸಲೂ ಅಸಾಧ್ಯವಾಗುವಂತಹ ಆರೋಗ್ಯ ಪ್ರಯೋಜನಗಳನ್ನು ಪಡೆದುಕೊಳ್ಳಬಹುದು.

ಈ ವಿಚಾರ ನಿಮಗೆ ಆಶ್ಚರ್ಯವನ್ನು ಉಂಟುಮಾಡಬಹುದು. ಆದರೆ ಇದು ಸತ್ಯ. ತುಪ್ಪದ ಸೇವನೆಯಿಂದ ಯಾವೆಲ್ಲಾ ಸಮಸ್ಯೆಗಳಿಂದ ದೂರ ಇರಬಹುದು ಎನ್ನುವುದನ್ನು ತಿಳಿದುಕೊಳ್ಳಲು ಮುಂದಿರುವ ವಿವರಣೆಯನ್ನು ಪರಿಶೀಲಿಸಿ

ಜೀವಕೋಶದ ಚಟುವಟಿಕೆ ಹೆಚ್ಚುವುದು ಆಯುರ್ವೇದದ ಪ್ರಕಾರ ಖಾಳಿ ಹೊಟ್ಟೆಯಲ್ಲಿ ತುಪ್ಪವನ್ನು ಸೇವಿಸಿದರೆ ದೇಹದ ಎಲ್ಲಾ ಜೀವಕೋಶಗಳಿಗೂ ಪೋಷಕಾಂಶ ದೊರೆಯುವುದು. ಜೀವಕೋಶವನ್ನು ಪುನಃ ಶ್ಚೇತನಗೊಳಿಸಬೇಕು ಎಂದಾದರೆ ತುಪ್ಪವನ್ನು ಸೇವಿಸಬೇಕು.

ಅಲ್ಲದೆ ದೇಹಕ್ಕೆ ಉತ್ತಮವಾದ ಆರೈಕೆಯನ್ನು ನೀಡುವುದು. ಚರ್ಮದ ಕಾಂತಿ ಹೆಚ್ಚುವುದು ತುಪ್ಪ ಜೀವಕೋಶಗಳ ಪೋಷಣೆ ಮತ್ತು ಪುನರುಜ್ಜೀವನ ಗೊಳಿಸುವುದರಿಂದ ಚರ್ಮವು ನೈಸರ್ಗಿಕವಾಗಿಯೇ ಆರೋಗ್ಯವನ್ನು ಪಡೆದುಕೊಳ್ಳುತ್ತದೆ.

ತ್ವಚೆಯಲ್ಲಿರುವ ಶುಷ್ಕತೆಯನ್ನು ಹೋಗಲಾಡಿಸಿ, ಸದಾ ಕಾಂತಿ ಹಾಗೂ ತೇವಾಂಶದಿಂದ ಕೂಡಿರುವಂತೆ ಮಾಡುತ್ತದೆ. ಸೋರಿಯಾಸಿಸ್‌ನಂತಹ ಚರ್ಮ ರೋಗಗಳನ್ನು ಇದು ತಡೆಯುವುದು. ಸಂಧಿವಾತವನ್ನು ತಡೆಯುತ್ತದೆ ತುಪ್ಪ ನೈಸರ್ಗಿಕವಾದ ಲುಬ್ರಿಕೆಂಟ್ ಮತ್ತು ಓಮೆಗಾ-3 ಕೊಬ್ಬಿನಾಮ್ಲವನ್ನು ಒಳ ಗೊಂಡಿದೆ.

ಹಾಗಾಗಿ ಇದನ್ನು ಕೀಲುಗಳಿಗೆ ಉತ್ತಮ ಆರೈಕೆ ಮಾಡುವುದು. ಸಂಧುಗಳ ನೋವಿಗೆ ಹಾಗೂ ಇನ್ನಿತರ ಮೂಳೆ ಸಂಬಂಧಿತ ಅನಾರೋಗ್ಯಕ್ಕೆ ತುಪ್ಪದ ಲೇಪನವನ್ನು ಮಾಡಬಹುದು. ತುಪ್ಪದ ಸೇವನೆಯಿಂದ ಆಸ್ಟಿಯೊಪೊರೋಸಿಸ್ ಸೇರಿದಂತೆ ಅನೇಕ ಮೂಳೆ ಸಮಸ್ಯೆಗಳನ್ನು ನಿವಾರಿಸುತ್ತದೆ.

ಮಿದುಳಿನ ಕಾರ್ಯ ಚಟುವಟಿಕೆಯನ್ನು ಹೆಚ್ಚಿಸುತ್ತದೆ ಖಾಲಿ ಹೊಟ್ಟೆಯಲ್ಲಿ ತುಪ್ಪದ ಸೇವನೆ ಮಾಡುವುದರಿಂದ ಮೆದುಳಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳು ನಿವಾರಣೆ ಹೊಂದುತ್ತವೆ. ಜೊತೆಗೆ ನೆನಪಿನ ಶಕ್ತಿ, ಕಲಿಕೆ, ಜ್ಞಾನ ಗ್ರಹಣ, ಕಾರ್ಯಚಟುವಟಿಕೆಗಳನ್ನು ಸುಧಾರಿಸುತ್ತದೆ.

ಅಲ್ಲದೆ ಬುದ್ಧಿಮಾಂದ್ಯತೆ ಅಲ್ಜಮೈರ್ ನಂತಹ ಕಾಯಿಲೆ ಬರದಂತೆ ತಡೆಯುವುದು. ತೂಕ ಇಳಿಸುವುದು ಸಾಮಾನ್ಯವಾಗಿ ತೂಕ ಹೆಚ್ಚಿಸಲು ತುಪ್ಪ ಸೇವಿಸಬೇಕು ಎನ್ನುವುದನ್ನು ಕೇಳಿರುತ್ತೀರಿ. ಅದೇ ನೀವು ಮುಂಜಾನೆ ಖಾಲಿ ಹೊಟ್ಟೆಯಲ್ಲಿ 5-10 ಮಿಲಿಯಷ್ಟು ತುಪ್ಪವನ್ನು ಸೇವಿಸಿದರೆ ನಿಮ್ಮ ಚಯಾಪಚಯ ಕ್ರಿಯೆ ಸುಧಾರಣೆ ಕಾಣುತ್ತದೆ.


ಅಲ್ಲದೆ ಗಣನೀಯವಾದ ತೂಕ ಇಳಿಕೆಯನ್ನು ನೀವು ನಿರೀಕ್ಷಿಸಬಹುದು. ಕೂದಲು ಉದುರುವಿಕೆಯನ್ನು ತಡೆಯುತ್ತದೆ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತುಪ್ಪ ಸೇವಿಸುವುದರಿಂದ ಅದು ಕೇಶರಾಶಿಯ ಸಂರಕ್ಷಣೆಗೆ ಸಹಾಯವಾಗುತ್ತದೆ. ಕೂದಲಿನ ಫೋಲಿಸೆಲ್‌ಗಳು ಆರೋಗ್ಯವಾಗಿರುವಂತೆ ಮಾಡುತ್ತದೆ.

ಇದರಿಂದ ಹೊಳಪಿನಿಂದ ಕೂಡಿರುವ ದಟ್ಟವಾದ ಕೂದಲನ್ನು ನೀವು ಹೊಂದಬಹುದು. ಲ್ಯಾಕ್ಟೋಸ್‌ಗಳನ್ನು ಸುಧಾರಿಸುತ್ತದೆ ಕೆಲವರಿಗೆ ಹಾಲು ಅಥವಾ ಹಾಲಿನಿಂದ ತಯಾರಿಸಿರುವ ಉತ್ಪನ್ನಗಳನ್ನು ಸೇವಿಸಿದಾಗ ಸೂಕ್ತ ರೀತಿಯ ಜೀರ್ಣಕ್ರಿಯೆ ಉಂಟಾಗುವುದಿಲ್ಲ.

ಅದೇ ಮುಂಜಾನೆ ಖಾಲಿ ಹೊಟ್ಟೆಯಲ್ಲಿ ತುಪ್ಪವನ್ನು ಸ್ವೀಕರಿಸಿದರೆ ಲ್ಯಾಕ್ಟೋಸ್ ಸಮಸ್ಯೆಯು ಸುಧಾರಣೆ ಕಾಣುತ್ತದೆ. ಜೀರ್ಣ ಕ್ರಿಯೆಯೂ ಉತ್ತಮವಾಗಿ ನೆರವೇರುವುದು. ಕ್ಯಾನ್ಸರ್‌ನಿಂದ ದೂರ ಇಡುವುದು ನೈಸರ್ಗಿಕವಾದ ತುಪ್ಪವನ್ನು ಖಾಲಿ ಹೊಟ್ಟೆಯಲ್ಲಿ ಸೇವಿಸಿದರೆ ಅನೇಕ ಬಗೆಯ ಕ್ಯಾನ್ಸರ್ ಕಾಯಿಲೆಯಿಂದ ದೂರ ಇರಬಹುದು.

## ಉದ್ಯೋಗ ನಷ್ಟ ಮತ್ತು ನಿರ್ವಹಣೆ

ಜೀವನದಲ್ಲಿ ನಮಗೆ, ನಮ್ಮ ಕುಟುಂಬಕ್ಕೆ ಬೇಕಾದ ಎಲ್ಲಾ ಅಗತ್ಯ ವಸ್ತುಗಳು, ಸೇವೆಗಳು, ನಾವು ಈಡೇರಿಸುವ ಆಸೆಗಳು ಪ್ರತಿಯೊಂದಕ್ಕೂ ಹಣ ಬೇಕೇ ಬೇಕು. ಸಾಮಾನ್ಯವಾಗಿ ಕುಟುಂಬಕ್ಕೆ ಒಂದು ಅಥವಾ




**ಸಾಮಾನ್ಯವಾಗಿ ಉದ್ಯೋಗ ಕಳೆದುಕೊಂಡರೆ ಜನರು ಈ ಕೆಳಗಿನ ಸಮಸ್ಯೆಗಳನ್ನು ಅನುಭವಿಸುತ್ತಾರೆ.**

- 1. ದೊಡ್ಡ ಆಘಾತವಾಗುತ್ತದೆ ಹಾಗೂ ಭವಿಷ್ಯದ ಬಗ್ಗೆ ಆತಂಕ, ಭಯ ಮನೆ ಮಾಡುತ್ತದೆ.
- 2. ಮನೆಯವರಲ್ಲಿಯೂ ಚಿಂತೆ ಶುರುವಾಗುತ್ತದೆ ಹಾಗೂ ಮನಸ್ಸು ದುರ್ಬಲಗೊಳ್ಳುತ್ತದೆ.
- 3. ನಿಮ್ಮ ಬಂಧುಮಿತ್ರರು ನೀವು ಎಲ್ಲಿ ದುಡ್ಡು ಕೇಳುತ್ತೀರೋ ಎಂದು ಅಂತರ ಕಾಪಾಡಿಕೊಳ್ಳುತ್ತಾರೆ.
- 4. ಸಾಲಕೊಟ್ಟ ಬ್ಯಾಂಕ್‌ಗಳು, ಸಾಲದಾತರು ಮನೆಗೆ ಬಂದು ಒತ್ತಡ ಹೇರುವ ಆತಂಕ.
- 5. ಉಳಿತಾಯದ ಹಣವೆಲ್ಲ ಕಳೆದುಕೊಂಡು ಹಣವಿಲ್ಲದೆ ಅಕೌಂಟು ಮತ್ತು ಜೇಬು ಖಾಲಿಯಾಗುತ್ತದೆ.
- 6. ಹಣಕ್ಕಾಗಿ ಮನುಷ್ಯ ಹತಾಶನಾಗುತ್ತಾನೆ ಹಾಗೆಯೇ ಬಗ್ಗಲು ಪ್ರಾರಂಭಿಸುತ್ತಾನೆ.
- 6. ಉದ್ಯೋಗದ ಹುಡುಕಾಟದಲ್ಲಿ ಕಡಿಮೆ ಸಂಬಳಕ್ಕೆ ರಾಜಿ ಮಾಡಿಕೊಳ್ಳುವ ಮನಸ್ಥಿತಿ.
- 7. ಉದ್ಯೋಗಕ್ಕಾಗಿ ಪರ ಊರಿಗೆ, ಪರ ರಾಜ್ಯ ಅಥವಾ ದೇಶಕ್ಕೆ ವಲಸೆ ಹೋಗುವ ಪರಿಸ್ಥಿತಿ.

ಎರಡು ಆದಾಯದ ಮೂಲಗಳು ಇರುತ್ತವೆ. ಒಂದು ವೇಳೆ ಒಂದೇ ಆದಾಯದ ಮೂಲವಿದ್ದು ಅದು ನಿಂತು ಹೋದರೆ, ಆ ಇಡೀ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಒಳಗಾಗಿ ಯಾವುದೇ ಅಗತ್ಯ ಸೇವೆಗಳು, ಉತ್ಪನ್ನಗಳನ್ನು ಬಳಸಲಾಗದೆ ನರಳುತ್ತಾರೆ. ಇದು ತುಂಬಾ ಆತಂಕಕಾರಿ ಪರಿಸ್ಥಿತಿ ಹಾಗೂ ಇದು ನೋವಿನಿಂದ ಕೂಡಿರುತ್ತದೆ. ಅಲ್ಲದೆ ಇದರಿಂದ ಅನೇಕ ತರಹದ ಸಮಸ್ಯೆಗಳನ್ನು ಕುಟುಂಬವು ಎದುರಿಸಬೇಕಾಗುತ್ತದೆ. ಹೀಗಾಗಿ ಯಾವ ರೀತಿಯ ಸಮಸ್ಯೆಗಳು ತಲೆದೋರುತ್ತವೆ, ಈ ಸಮಸ್ಯೆಗಳನ್ನು ತಡೆಯಲು ಸಾಧ್ಯವೇ, ಈ ಸಮಸ್ಯೆಗಳನ್ನು ಬಂದಾಗ ಹೇಗೆ ನಿಭಾಯಿಸಬಹುದು ಎಂದು ತಿಳಿಯೋಣ.

- **ಪೂರ್ವ ಸಿದ್ಧತೆ**
- **ವ್ಯವಸ್ಥೆಯಲ್ಲಿ ಬೆಂಬಲ**
- **ಎರಡು ಆದಾಯ**
- **ವಿವಿಧ ಆದಾಯ ಮೂಲಗಳು**

» **ಬೆಳೆಗೆ ನೀರು ಹಾಯಿಸುವ ಅನಿವಾರ್ಯತೆ ಒಂದು ಕಡೆಗೆ, ಸಕಾಲಕ್ಕೆ ಎತ್ತಿ ರಿಪೇರಿ ಮಾಡಿಸುವುದು ಮತ್ತೊಂದು ಕಡೆಗೆ. ಅದನ್ನು ಹೊರ ತೆಗೆಯುವವರ ದುಂಬಾಲು ಬೀಳಬೇಕು. ಅವರಿಗೆ ನಾವೊಬ್ಬರೇ ಗ್ರಾಹಕರಲ್ಲ. ಮನವೊಲಿಸುವ ಪ್ರಯತ್ನ ಒಂದೇ ದಾರಿ. ಮುಂದಿನದು ಅದರ ರಿಪೇರಿ ಮತ್ತು ಸುಲಿಗೆಯ ಕಥೆ. ಬೀಜ, ಗೊಬ್ಬರ, ದರ, ಧಾರಣೆ,**

## ರೈತರ ಸುಲಿಗೆಗೆ ಮಿತಿಯಿಲ್ಲ

ಪ್ರಸ್ತುತ ರೈತನ ಬೆಳೆಗೆ ನೀರೇ ಜೀವಾಳ. ಅದು ಆತನಿಗೆ ವಿವಿಧ ಸಂಪನ್ಮೂಲಗಳ ಮೂಲಕ ದೊರಕುತ್ತದೆ. ಬಯಲು ಸೀಮೆಗಂತೂ ಕೊಳವೆಬಾವಿಗಳೇ ಆಸರೆ ಮತ್ತು ಆಶ್ರಯ. ಅವು ಸರಿಯಾಗಿ ನಡೆದರೆ ಒಕೆ. ಇಲ್ಲದಿದ್ದರೆ ಅದರ ಪಾಡು ಹೇಳಲಾಗದು. ರೈತನ ಸುತ್ತ ಹತ್ತಾರು ಸಮಸ್ಯೆ ಮತ್ತು ಸವಾಲುಗಳು ಹುತ್ತಗಟ್ಟುತ್ತವೆ. ಆತನ ಬದುಕು ಜೂಜಾಟ. ಮಳೆ, ಬೆಲೆ, ಬೀಜ ಮತ್ತು ಕೀಟನಾಶಕಗಳ ತೊಡಕು ಒಂದು ಕಡೆಯಾದರೆ, ಸಕಾಲಕ್ಕೆ ದೊರೆಯದ ಸೇವೆಗಳು, ಜೊತೆಗೆ ವಿಪರೀತ ಬೆಲೆಗಳಿಂದ ಕಂಗಾಲಾಗುತ್ತಾನೆ.

ಕೊಳವೆ ಬಾವಿಗೆ ಅಳವಡಿಸುವ ಸಬ್ಮರ್ಸಿಬಲ್ ಮೋಟರ್ ರೈತನಿಗೆ ಆತ್ಮ ಇದ್ದಂತೆ. ಅದೊಂದು ರೀತಿಯ ಜೀವಾತ್ಮ! ಮೋಟರ್ ನಿಂತಿತು ಎಂದರೆ ಆತಂಕ ಮತ್ತು ದಿಗಿಲು. ವಿದ್ಯುತ್ ಪೂರೈಕೆಯ ಕೊರತೆಯಿಂದಲೋ, ವ್ಯತ್ಯಯದಿಂದಲೋ ಮೋಟಾರ್ ಕೆಟ್ಟರೆ ಮುಗೀತು. ನೂರಾರು ಅಡಿ ಆಳದಿಂದ ಅದನ್ನು ಮೇಲಕ್ಕೆ ಎತ್ತಿ ರಿಪೇರಿ ಮಾಡಿಸಿ ಇಳಿಸುವಷ್ಟರಲ್ಲಿ ಸಾಕು ಸಾಕೆನಿಸಿ ಬಿಡುತ್ತದೆ.


ಬೆಳೆಗೆ ನೀರು ಹಾಯಿಸುವ ಅನಿವಾರ್ಯತೆ ಒಂದು ಕಡೆಗೆ, ಸಕಾಲಕ್ಕೆ ಎತ್ತಿ ರಿಪೇರಿ ಮಾಡಿಸುವುದು ಮತ್ತೊಂದು ಕಡೆಗೆ. ಅದನ್ನು ಹೊರ ತೆಗೆಯುವವರ ದುಂಬಾಲು ಬೀಳಬೇಕು. ಅವರಿಗೆ ನಾವೊಬ್ಬರೇ ಗ್ರಾಹಕರಲ್ಲ. ಮನವೊಲಿಸುವ ಪ್ರಯತ್ನ ಒಂದೇ ದಾರಿ. ಮುಂದಿನದು ಅದರ ರಿಪೇರಿ ಮತ್ತು ಸುಲಿಗೆಯ ಕಥೆ. ಬೀಜ, ಗೊಬ್ಬರ, ದರ, ಧಾರಣೆ, ಹೀಗೆ ಹಲವಾರು ಸಂದರ್ಭಗಳಲ್ಲಿ ಸುಲಿಗೆ ಇದೆ. ಅವುಗಳಲ್ಲಿ ಮೋಟರ್ ರಿಪೇರಿ ಸುಲಿಗೆಯೂ ಒಂದು.

ಸುಟ್ಟು ಹೋದ ಮೋಟರನ್ನು ರೀ ವೈಂಡಿಂಗ್ ಮಾಡಲು ದರ ನಿಗದಿಪಡಿಸುವವರ್ಯಾರು? ಅದನ್ನು ನಿಯಂತ್ರಿಸುವವರು ಯಾರು? ಎಂಬುದೇ ಯಕ್ಷಪ್ರಶ್ನೆ. ಮೊನ್ನೆ ನಮ್ಮದೇ ತೋಟದ ಕೊಳವೆ ಬಾವಿಯ ಮೋಟರ್ ಆರು ತಿಂಗಳ ಅಂತರದಲ್ಲಿ ಮತ್ತೊಮ್ಮೆ ಕೆಟ್ಟು ನಿಂತಿತು.

ಅಚ್ಚರಿಯಾದರೂ ಬೇರೆ ದಾರಿ ಇಲ್ಲ. ಮೇಲಕ್ಕೆತ್ತಲೇ ಬೇಕಾಯಿತು. ಕಳೆದ ಬಾರಿ ಸುತ್ತಿ ಕೊಟ್ಟ ವ್ಯಕ್ತಿಯ ಕಡೆಗೆ ಕೊಂಡೊಯ್ಯಲಾಯಿತು. ಆತನ ಬಿಲ್ಲು ನೋಡಿದರೆ, ಐದು ಸಾವಿರ ಮೀರಿತ್ತು. ಆರು ತಿಂಗಳ ಅಂತರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಮೊತ್ತ ಏರಿಸಲಾಗಿದೆ. ಯಾಕೆ ಹೀಗೆ ಎಂದು ವಿಚಾರಿಸಿದರೆ, ವೈರ್ ರೇ ಟು ಹೆಚ್ಚಾಗಿದೆ ಎಂಬ ಪ್ರತಿಕ್ರಿಯೆ. ಆನ್‌ಲೈನಿನಲ್ಲಿ ಚೆಕ್ ಮಾಡಿದಾಗ ಒಂದು ಕೆಜಿಗೆ ಒಂಬೈನೂರು ಬೆಲೆ.

ಆತ ಕೆಜಿಗೆ ಸಾವಿರದ ಐದುನೂರು ರೂಪಾಯಿಗಳಂತೆ ಬಿಲ್ ಮಾಡಿದ್ದ. ಪ್ರಶ್ನಿಸಿದರೆ ಇಷ್ಟ ಇದ್ರೆ ರಿಪೇರಿ ಮಾಡಿಸಿಕೊಳ್ಳಿ, ಇಲ್ಲವೆಂದರೆ ಬೇಡ ಎಂದು ಕಡ್ಡಿ ಮುರಿದ. ರೈತ ಇನ್ನೇನು ಮಾಡಲು ಸಾಧ್ಯ? ಬೇರೆಯವರ ಕಡೆ ಹೋದರೂ ಇದೇ ಬೆಲೆ ಹೇಳುತ್ತಾರೆ. ರೈತರನ್ನು ಎಲ್ಲರೂ ಯಾಮಾರಿಸುತ್ತಾರೆ.

ಇದೊಂದೇ ಅಲ್ಲ. ರೈತ ಎಂದರೆ ಸುಲಿಗೆಗೆ ಸುಲಭದ ವಸ್ತು. ಇದಕ್ಕೆಲ್ಲ ಕಡಿವಾಣ ಹಾಕುವವರು ಯಾರು? ಭೂಮಿಯಿಂದ ಆಕಾಶಕ್ಕೆ ಜಿಗಿಯುವ ಕ್ಷಿಪಣಿಗಳನ್ನ ಶೋಧಿಸಿದ್ದೇವೆ. ಅಂತರಿಕ್ಷವನ್ನೇ ಅಧ್ಯಯನಕ್ಕೊಳಪಡಿಸಿ, ಸಂಶೋಧನೆಗೆ ಮುಂದಾಗಿದ್ದೇವೆ. ಆದರೆ ರೈತನ ಬವಣೆಯ ಬದುಕಿಗೆ ಬಿಡುಗಡೆ ಇಲ್ಲವೇ? ಆತನ ನೋವುಗಳಿಗೆ ಮಾತ್ರೆಗಳಿಲ್ಲ ಎಂಬಂತಾಗಿದೆ!



ಇಂದು ರೈತ ಎಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಜೀವಿಸುತ್ತಿದ್ದಾನೆ ಎಂದು ಊಹಿಸಿಕೊಳ್ಳುವುದು ಕಷ್ಟ. ಮಧ್ಯವರ್ತಿಗಳ ಕಾಟ, ಕೂಲಿ ಆಳುಗಳ ಕೊರತೆ, ವಿದ್ಯುತ್ತಿನ ವ್ಯತ್ಯಯ, ಹವಾಮಾನ ವೈಪರೀತ್ಯ, ಅಕಾಲಿಕ ಮಳೆ, ಬಂದ ಬೆಳೆಗೆ ಸೂಕ್ತ ಕಾಲದಲ್ಲಿ ಕೊಯ್ಲಿಗೆ ಜನ ಸಿಗದಿರುವುದು, ಬೆಳೆ ಕೈಗೆ ಹತ್ತಿದರೂ ಮಾರುಕಟ್ಟೆಗೆ ಕೊಂಡೊಯ್ದಾಗ ಪಿಳ್ಳೆ ನೆಪ ಹೇಳಿ ದರ ಕಡಿಮೆ ಮಾಡುವುದು, ಹೀಗೆ ಒಂದಲ್ಲ ಎರಡಲ್ಲ ಸರಪಳಿಯಂತೆ ಜೋಡಿಸಬಹುದು.

ಬೇಸತ್ತ ಜೀವಗಳು ಬೆಲೆತೆತ್ತು ಹೋಗಿವೆ. ಬೇಸಾಯ ಮಾಡೋನು ದೇಶ ಹಿಡಿದೋದ, ಕೂಲಿ ಮಾಡೋನು ಕುದುರೆ ಏರಿದ ಎಂಬ ಗಾದೆ ಮಾತು ಮತ್ತೆ ಮತ್ತೆ ನೆನಪಾಗುತ್ತದೆ. ಭಾರತದಲ್ಲಿ ಯಾರನ್ನಾದರೂ ಸುಲಭವಾಗಿ ಶೋಷಿಸಬಹುದು ಎಂದರೆ ಅದು ಕೃಷಿಕನನ್ನು. ಪುಣ್ಯವಶಾತ್, ಇನ್ನೂ ಕೃಷಿಗೆ ಆದಾಯ ತೆರಿಗೆ ವಿಧಿಸಿಲ್ಲ.

**– ಡಾ.ಎಲ್ಲಪ್ಪ ಜಿ.**ಕಲಾದಗಿ

## ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ದೇವರಿಲ್ಲ

ಒಂದೊಳ್ಳೆ ಮಾತು

ನಮ್ಮ ಹೆತ್ತ ತಾಯಿಯ ಕಣ್ಣಲ್ಲಿ ಒಂದು ಪುಟ್ಟ ಸಂತೋಷವನ್ನು ನೋಡಲು ನಾವು ಏನೆಲ್ಲ ಮಾಡಬಲ್ಲೆವು? ಅವಳ ಜೀವಮಾನದ ಕೊನೆಯ ಆಸೆಯನ್ನು ಈಡೇರಿಸಲು ನಮ್ಮ ಶಕ್ತಿಯನ್ನೆಲ್ಲ ಧಾರೆ ಎರೆಯಲು ಸಾಧ್ಯವೇ? ಇಂಥದ್ದೇ ಒಂದು ಘಟನೆಯನ್ನು ನಿಮಗೆ ಹೇಳಬೇಕಿದೆ. ಇದು 2022ರ ಮಾತು. ಕೇರಳದ ಕೊಟ್ಟಾಯಂ ಮೂಲದ 87 ವರ್ಷದ ವೃದ್ಧೆ, ಎಲಿಕ್ಕುಟ್ಟಿ ಪೌಲ್ ಅವರ ಕಣ್ಣುಗಳಲ್ಲಿ ಒಂದು ಅಪರೂಪದ ಕನಸಿತ್ತು.

ಪಶ್ಚಿಮ ಘಟ್ಟಗಳ ಮಡಿಲಲ್ಲಿ, ಪ್ರತಿ 12 ವರ್ಷಗಳಿಗೊಮ್ಮೆ ಮಾತ್ರ ಭೂಮಿಗೆ ನಡುಹಗಲಿನ ನಕ್ಷತ್ರಗಳಂತೆ ಅರಳುವ ನೀಲಕುರುಂಜಿ ಹೂವುಗಳ ನೇರಳೆ ಸಾಗರವನ್ನು ಒಮ್ಮೆಯಾದರೂ ಕಣ್ತುಂಬಿಕೊಳ್ಳ ಬೇಕು ಎನ್ನುವುದು ಆಕೆಯ ಆಸೆಯಾಗಿತ್ತು. ಆದರೆ, ಸಂಸಾರದ ಜಂಜಾಟ ಅದೆಲ್ಲ ಮುಗಿಯುವ ಹೊತ್ತಿಗೆ ಮುಪ್ಪು ಆವರಿಸಿಯಾಗಿತ್ತು. ಈಗಂತೂ ಆಕೆ ಸಂಪೂರ್ಣ ಮೆತ್ತಗಾಗಿದ್ದಳು.

ಮುಪ್ಪಿನ ಕಾಯ, ಜಿಟಿಜಿಟಿ ಜೀವ, ನಡೆಯಲಾಗದ ಅಸಹಾಯ ಕತೆ... ಇನ್ನೊಂದು ಜನ್ಮವಿದ್ದರೆ ನೋಡಿದರಾಯಿತು ಎಂದುಕೊಂಡು ಆ ಮುಗ್ಧ ಜೀವ ಸುಮ್ಮನಾಗಿತ್ತು.

ಆದರೆ, ತಾಯಿಯ ಮನಸಿನ ಮೂಕ ಆಸೆಯನ್ನು ಆಕೆಯ ಇಬ್ಬರು ಮಕ್ಕಳಾದ ರೋಜನ್ ಮತ್ತು ಸತ್ಯನ್ ಅರಿತಿದ್ದರು. ಹೆತ್ತ ಕರುಳಿನ ಹಂಬಲವನ್ನು ಹಾಗೇ ಬಿಡಲು ಆ ಮಕ್ಕಳಿಗೆ ಮನಸ್ಸಾಗಲಿಲ್ಲ. ತಾಯಿಯ ಕೊನೆಯ ದಿನಗಳ ಆಸೆಯನ್ನು ನನಸಾಗಿಸಲೇಬೇಕೆಂದು ಪಣತೊಟ್ಟ ಅವರು, ಅವಳನ್ನು ಕರೆದುಕೊಂಡು ಇಡುಕ್ಕಿಯ ಕಲ್ಲಿಪ್ಪಾರ ಬೆಟ್ಟಗಳ ಕಡೆಗೆ ಸುಮಾರು 100 ಕಿಲೋ ಮೀಟರ್ ದೂರ ಪ್ರಯಾಣ ಬೆಳೆಸಿದರು.

ಆದರೆ, ಬೆಟ್ಟದ ತಪ್ಪಲು ತಲುಪಿದಾಗ ವಿಧಿಯ ಆಟ ಬೇರೆಯೇ ಇತ್ತು. ಹೂವುಗಳು ಅರಳಿದ ಸ್ವರ್ಗವನ್ನು ತಲುಪಲು ಅಲ್ಲಿ ಯಾವುದೇ ರಸ್ತೆ ಇರಲಿಲ್ಲ. ಯಾರಾದರೂ ಆಗಿದ್ದರೆ ಅಲ್ಲಿಗೇ ಭರವಸೆ ಕಳೆದುಕೊಂಡು ಮರಳಿ ಹೋಗುತ್ತಿದ್ದರೇನೋ. ಆದರೆ ಆ ಮಕ್ಕಳಿಗೆ ತಾಯಿಯನ್ನು ಅಲ್ಲಿಯವರೆಗೆ ಕರೆತಂದು, ಆಕೆಯ ಕಣ್ಣಲ್ಲಿ ನಿರಾಶೆ ನೋಡಲು ಸಾಧ್ಯವಿರಲಿಲ್ಲ.

ಅಮ್ಮನನ್ನು ಮಗುವಿನಂತೆ ತಮ್ಮ ಕೈಗಳಲ್ಲಿ ಎತ್ತಿಕೊಂಡರು. ಒಬ್ಬರಾದ ನಂತರ ಮತ್ತೊಬ್ಬರು ಆ 87 ವರ್ಷದ ಹೆತ್ತಮ್ಮನನ್ನು ಹೆಗಲ ಮೇಲೆ ಹೊತ್ತುಕೊಂಡು ನಡೆದೇ ಬಿಟ್ಟರು. ಕಡಿದಾದ, ಕಲ್ಲು-ಮುಳ್ಳುಗಳಿಂದ ತುಂಬಿದ್ದ ಆ ಗುಡ್ಡಗಾಡು ಹಾದಿಯಲ್ಲಿ, ಒಣಗುತ್ತಿದ್ದ ಗಂಟಲು, ಸುರಿಯುತ್ತಿದ್ದ ಬೆವರಿನ ನಡುವೆಯೂ ಸುಮಾರು 1.5 ಕಿಲೋಮೀಟರ್ ಬೆಟ್ಟವನ್ನು ಜೀವ ಪಣಕ್ಕಿಟ್ಟು ಹತ್ತಿದರು. ಪ್ರೀತಿಯ ಶಕ್ತಿ ಅದೆಷ್ಟು ದೊಡ್ಡದೆಂದರೆ, ಆ ಕಲ್ಲುಗಳೂ ಅವರ ಪಾದಗಳಿಗೆ ನೋವುಂಟು ಮಾಡಲಿಲ್ಲ. ಕೊನೆಗೂ ಬೆಟ್ಟದ ತುತ್ತತುದಿ ತಲುಪಿದಾಗ... ಅಲ್ಲಿ ಸೃಷ್ಟಿಯ ಪವಾಡವೇ ಕಾಯುತ್ತಿತ್ತು!

ಎಲಿಕ್ಕುಟ್ಟಿ ಅವರ ಕಣ್ಣೆದುರು ಕೋಟಿ ಕೋಟಿ ನೇರಳೆ ಹೂವುಗಳ ಸಾಗರವೇ ಅನಾವರಣ ಗೊಂಡಿತ್ತು. ಆ ಹೂವುಗಳ ಸೌಂದರ್ಯವನ್ನು ನೋಡಿದ ಆ ವೃದ್ಧ ತಾಯಿಯ ಕಣ್ಣುಗಳಿಂದ ಆನಂದಭಾಷ್ಪ ಧಾರೆಧಾರೆಯಾಗಿ ಹರಿಯಿತು. ತನ್ನ ಎರಡು ಮಕ್ಕಳ ಹೆಗಲ ಮೇಲೆ ಕುಳಿತು ಆ ಸ್ವರ್ಗವನ್ನು ನೋಡಿದಾಗ, ಆಕೆಯ ಮುಖದಲ್ಲಿದ್ದ ನೆಮ್ಮದಿ ಮತ್ತು ಧನ್ಯತೆಯ ಭಾವ ಜಗತ್ತಿನ ಯಾವುದೇ ಸಂಪತ್ತಿಗೂ ಸಾಟಿಯಿರಲಿಲ್ಲ. ಈ ಭಾವುಕ ಕ್ಷಣದ ಚಿತ್ರಗಳು ಇಡೀ ದೇಶದ ಕಣ್ಣಾಲಿಗಳನ್ನು ಒದ್ದೆ ಮಾಡಿದವು. ಪ್ರೀತಿ ಎಂದರೆ ಕೇವಲ ಒಣ ಮಾತುಗಳಲ್ಲ, ಅದು ಹೆತ್ತವರಿಗಾಗಿ ಕರಗುವ



> **ಪಶ್ಚಿಮ ಘಟ್ಟಗಳ ಮಡಿಲಲ್ಲಿ, ಪ್ರತಿ 12 ವರ್ಷಗಳಿಗೊಮ್ಮೆ ಮಾತ್ರ ಭೂಮಿಗೆ ನಡುಹಗಲಿನ ನಕ್ಷತ್ರಗಳಂತೆ ಅರಳುವ ನೀಲಕುರುಂಜಿ ಹೂವುಗಳ ನೇರಳೆ ಸಾಗರವನ್ನು ಒಮ್ಮೆಯಾದರೂ ಕಣ್ಣುಂಬಿಕೊಳ್ಳ ಬೇಕು ಎನ್ನುವುದು ಆಕೆಯ ಆಸೆಯಾಗಿತ್ತು. ಆದರೆ, ಸಂಸಾರದ ಜಂಜಾಟ ಅದೆಲ್ಲ ಮುಗಿಯುವ ಹೊತ್ತಿಗೆ ಮುಪ್ಪು ಆವರಿಸಿಯಾಗಿತ್ತು. ಈಗಂತೂ ಆಕೆ ಸಂಪೂರ್ಣ ಮೆತ್ತಗಾಗಿದ್ದಳು.**

ಕರುಳು ಮತ್ತು ಅವರಿಗಾಗಿ ಮಿಡಿಯುವ ಹೃದಯ ಎಂಬುದನ್ನು ಈ ಇಬ್ಬರು ಶ್ರವಣ ಕುಮಾರರು ಜಗತ್ತಿಗೆ ತೋರಿಸಿಕೊಟ್ಟರು.

ವಯಸ್ಸಾದ ಹಾಗೆ ತಂದೆ ತಾಯಿಗಳಿಂದ ನಾವು ದೈಹಿಕವಾಗಿ ಮಾತ್ರ ಅಲ್ಲ ಮಾನಸಿಕವಾಗಿ ಕೂಡ ದೂರವಾಗುತ್ತಾ ಹೋಗುತ್ತೇವೆ. ನಮಗಾಗಿ ಸರ್ವಸ್ವವನ್ನು ತ್ಯಾಗ ಮಾಡಿ ಬೆಳೆಸಿದ ತಂದೆ ತಾಯಿಗಳಿಗೆ ಕನಿಷ್ಠ ಸಮಯ ಕೊಡುವ ವಿವೇಚನೆ ಕೂಡ ನಮಗಿರುವುದಿಲ್ಲ. ಅವರಿಗೊಂದು ಕರೆ ಮಾಡಿ ಮಾತನಾಡುವ ವ್ಯವಧಾನವನ್ನೂ ಕಳೆದುಕೊಂಡು ಬಿಟ್ಟಿರುತ್ತೇವೆ.

ನಮ್ಮನ್ನೇ ಪ್ರಪಂಚ ಎಂದು ಭಾವಿಸಿ ಬದುಕಿದ ಆ ಜೀವಗಳಿಗೆ ನೋವುಂಟು ಮಾಡುವ ಮುನ್ನ ನಾವು ಕೂಡ ಅವರಂತೆ ಮುಂದೆ ಇಂಥದ್ದೇ ದಿನಗಳನ್ನು ನೋಡಬೇಕಾಗಬಹುದು ಎನ್ನುವ ಕಾಳಜಿ ಇದ್ದರೆ ಸಾಕು. ತಂದೆ ತಾಯಿಗಳ ಜೊತೆ ಸಮಯ ಕಳೆಯುವುದು ಪ್ರೀತಿ ತೋರುವುದು ಜವಾಬ್ದಾರಿಯಲ್ಲ, ಅದು ಬದುಕುವ ರೀತಿ ಅದನ್ನು ಕಳೆದುಕೊಂಡವರು ಏನನ್ನು ಗಳಿಸಿದರೂ ನಿರರ್ಥಕ.

**– ರೂಪಾ** ಗುರುರಾಜ್



## ಅನ್ನ

ಕೆಲಸ ಹೇಳಿದ್ದಾರೆ ಹಾಗಾಗಿ ಗುಂಡಿ ಅಗೆಯುತ್ತಿದ್ದಾರೆ. ಇಬ್ಬರೂ ಬೆವರು ಇಳಿಸಿ ಬದಿಯಲ್ಲಿ ಕುಳಿತಾಗ ಎರಡು ದಿನದಿಂದ ಹೊಟ್ಟೆಗೆ ಏನೂ ತಿನ್ನದಿರುವುದು ನೆನಪಾಗ್ತಾ ಇತ್ತು. ಈ ದಿನದ ಕೆಲಸದಿಂದ ಸಿಗುವ ಸಣ್ಣ ಮೊತ್ತದಲ್ಲಿ ಮನೆಗೂ ತನಗೂ ಹೊಟ್ಟೆಗೆನಾದರೂ ಸಿಗಬಹುದೆನ್ನುವಾಸೆಯಿಂದ ತಲೆ ತಿರುಗಿದರೂ ಸುಸ್ತಾದರು ಗುಂಡಿ ತೆಗೆದು ನಿಲ್ಲಿಸಿದ್ದಾರೆ. ಆಗ ದೊಡ್ಡದೊಂದು ಗಾಡಿಯಲ್ಲಿ ಹೊತ್ತು ತಂದಿದ್ದ ಅನ್ನ ಸಾಂಬಾರು ಹೀಗೆ ವಿವಿಧ ಭಕ್ಷ ಉಳಿದದ್ದನ್ನು ಗುಂಡಿಯೊಳಗೆ ತುಂಬ ಕೆಲಸ ಶುರುವಾಗಿದೆ.

ನೋಡುವುದಷ್ಟೇ ಕೆಲಸವಾಗಿದೆ. ಗಾಡಿ ಹೊರಟು ಹೋದ ತಕ್ಷಣ ಮಣ್ಣು ಮುಚ್ಚುವುದನ್ನ ಬಿಟ್ಟು ತನ್ನಲ್ಲಿದ್ದ ಬಟ್ಟೆಯನ್ನೇ ಬಿಡಿಸಿಟ್ಟು ಸಾಧ್ಯವಾದಷ್ಟು ತುಂಬಿಸಿ ಒಂದಷ್ಟು ಹೊಟ್ಟೆಗಿಳಿಸಿಕೊಂಡು ಮನೆಯ ಕಡೆಗೆ ಓಡಿದ್ದಾನೆ. ಮನೆಯವರೆಲ್ಲರಿಗೂ ಇಂದು ಹೊಟ್ಟೆ ತುಂಬ ಊಟ. ಸುತ್ತಮುತ್ತ ಊರಿನ ಹಸಿದಿದ್ದವರೆಲ್ಲರೂ ಗುಂಡಿಯ ಬಳಿ ಬಂದು ತಮಗೆ ಬೇಕಾದಷ್ಟು ತೆಗೆದುಕೊಂಡು ಹೋದಾಗ ಅಲ್ಲಿದ್ದ ಬೀದಿನಾಯಿಗಳಿಗೂ ಅನ್ನ ಸಿಗದಂತಹ ಸ್ಥಿತಿ ನಿರ್ಮಾಣ ಆಯಿತು. ಗುಂಡಿ ಹಾಗೆ ಖಾಲಿ ಉಳಿಯಿತು

**– ಧೀರಜ್** ಬೆಳ್ಳಾರೆ

## ಗ್ರಾಮೀಣ ಸೊಗಡಿನ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್

ಅಪ್ಪಟ ಗ್ರಾಮೀಣ ಪ್ರತಿಭೆಯಾದ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹನೀಯರಲ್ಲಿ ಒಬ್ಬರು. ಅವರು ಗ್ರಾಮೀಣ ಬದುಕಿನ ಸಮಗ್ರ ದರ್ಶನವನ್ನು ತಮ್ಮ ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ. ತಮ್ಮ ಊರಾದ ಗೊರೂರಿನ ಜೀವನವನ್ನು ತಮ್ಮ ಸಾಹಿತ್ಯದ ಒಂದು ಭಾಗವಾಗಿಸಿಕೊಂಡ ಅವರು ಗೊರೂರಿಗೆ ಒಂದು ವಿಶಿಷ್ಟ ಸ್ಥಾನವನ್ನೇ ಜನಮಾನಸದಲ್ಲಿ ಸೃಷ್ಟಿಸಿದರು. ಆದ್ದರಿಂದಲೇ ಗೊರೂರು ಎಂದರೇ ರಾಮಸ್ವಾಮಿ ಅಯ್ಯಂಗಾರ್ ಎನ್ನುವ ತಾದ್ಯಾತ್ಮವನ್ನು ಕಾಣಬಹುದು. ಅವರ ಅಭಿಮಾನಿಗಳು 1973ರಲ್ಲಿ ಗೊರೂರು ಗೌರವ ಗ್ರಂಥವನ್ನು ಅರ್ಪಿಸಿದ್ದಾರೆ. ಡಾ. ಗೊರೂರರ ಬಗ್ಗೆ ಅದೇ ಊರಿನವರಾದ ಗೊರೂರು ಸೋಮಶೇಖರರವರು ತಮ್ಮ ಗೊರೂರು ನೆನಪುಗಳು ಎಂಬ ಪುಸ್ತಕದಲ್ಲಿ ಅವರನ್ನು ನೆನಪಿಸಿಕೊಳ್ಳುತ್ತಾ ಅವರನ್ನು ಒಂದು ಪಾತ್ರದಂತೆ ನಿರೂಪಿಸಿದ್ದಾರೆ. ಬೇರೆಬೇರೆ ಸಂದರ್ಭಗಳಲ್ಲಿ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬದುಕು ಮತ್ತು ಬರಹಗಳ ಬಗ್ಗೆ ಪ್ರಬಂಧ, ಲೇಖನಗಳು ಬಂದಿವೆಯಾದರೂ ಗೊರೂರು ಅನಂತರಾಜುರವರ ಪುಸ್ತಕ ಗ್ರಾಮೀಣ ಸೊಗಡಿನ ಸಾಹಿತಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಹೆಚ್ಚು ಗಮನ ಸೆಳೆಯುತ್ತದೆ. ಇದಕ್ಕೆ ಮೊದಲು ತಮ್ಮದೇ ಊರಿನ ಸುಪ್ರಸಿದ್ಧ ಹಿರಿಯ ಸಾಹಿತಿ ಡಾ. ಗೊರೂರರ ಬಗ್ಗೆ ವಿಶೇಷ ಗೌರವಾಭಿಮಾನವನ್ನು ಹೊಂದಿರುವ ಲೇಖಕರು ಸಹ ಸಾಹಿತ್ಯಾಭಿಮಾನಿಗಳೊಂದಿಗೆ ಡಾ. ಗೊರೂರು ಸ್ಮರಣ ಸಮಿತಿಯನ್ನು ರಚಿಸಿಕೊಂಡು 1991ರಲ್ಲಿ ಏರ್ಪಡಿಸಿದ್ದ ರಾಜ್ಯೋತ್ಸವ ಸಮಾರಂಭದಲ್ಲಿ ಡಾ. ಗೊರೂರರ ಬದುಕು ಮತ್ತು ಬರಹ ಕುರಿತಂತೆ ಪ್ರಬಂಧವನ್ನು ಮಂಡಿಸಿದ್ದಾರೆ. 11ನೇ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ಪ್ರಕಟಿಸಿದ ಸಾರಸ್ವತ ಲೋಕದ ದಿಗ್ಗಜರು ಕೃತಿಯಲ್ಲಿ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಬದುಕು ಬರಹ ಕುರಿತಂತೆ ಲೇಖನವನ್ನು ಬರೆದಿದ್ದಾರೆ. ಇದಲ್ಲದೇ ಡಾ. ಗೊರೂರು ಮತ್ತು ಇತರ ಲೇಖನಗಳು ಕೃತಿಯನ್ನೂ ಪ್ರಕಟಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಮಗೆ ವಹಿಸಿರುವ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸುವಲ್ಲಿ ಸಫಲತೆಯತ್ತ ಸಾಗಿರುವುದನ್ನು ಪುಸ್ತಕದ ಮೊದಲ ನೋಟದಲ್ಲೇ ಗ್ರಹಿಸಬಹುದು.

ಲೇಖಕರು ಮಹಾನ್ ಸಾಹಿತ್ಯ ದಿಗ್ಗಜರಾದ ಡಾ. ಗೊರೂರರ ಬದುಕಿನ ಪ್ರಮುಖ ಘಟ್ಟಗಳು, ವಿಶೇಷ ಪ್ರಸಂಗಗಳು, ಎದುರಾದ ನೋವು ನಲಿವುಗಳು, ಜೀವನಾದರ್ಶ, ಬರಹಗಳ ವೈವಿದ್ಯಗಳು, ಪ್ರಬಂಧಗಳು, ಕಥೆಗಳು, ಕಾದಂಬರಿಗಳು, ಜನಪದ ಸಾಹಿತ್ಯ, ಪ್ರವಾಸ ಕಥನ, ಜೀವನ ಚಿತ್ರಗಳು ಎಲ್ಲವನ್ನೂ ಅಡಕಗೊಳಿಸಿದ್ದಾರೆ.

13ಮಕ್ಕಳಲ್ಲಿ ಒಬ್ಬರಾದ ಗೊರೂರರು ಹೈಸ್ಕೂಲಿನವರಗೆ ಮಾತ್ರ ವಿದ್ಯಾಭ್ಯಾಸ ಮಾಡಿದ್ದು ಅವರು ಶಾಲೆಯಲ್ಲಿ ಕಲಿತದ್ದಕ್ಕಿಂತ ಜೀವನದಲ್ಲಿ ಕಲಿತಿದ್ದೇ ಹೆಚ್ಚು. ದೇಶಸೇವೆಗೆ ಸಂಬಂಧಿಸಿದ ಅನೇಕ ಕೆಲಸಗಳನ್ನು ಮಾಡುತ್ತಾ ಅನುಭವವನ್ನು ಗಳಿಸಿದ್ದು ಅವರ ವೈಶಿಷ್ಟ್ಯ. ಗೊರೂರರಿಗೆ ಹುಟ್ಟುತ್ತಾ ಒಂದು ವ್ಯಕ್ತಿತ್ವ ಇದ್ದರೆ ಬೆಳೆಯುತ್ತಾ ಆ ವ್ಯಕ್ತಿತ್ವ ಮತ್ತೊಂದು ಆಯಾಮವನ್ನು ಪಡೆದುಕೊಳ್ಳುತ್ತದೆ. ಅದು ಅವರ ಗಾಂಧಿ ಜೀವನ ಚಿಂತನೆ ಎಂದು ಪ್ರಾರಂಭಿಸುತ್ತಾ ಗಾಂಧೀಜಿಯವರಿಂದ ಗೊರೂರರು ಪ್ರಭಾವಿತರಾಗಿದ್ದು ಹಾಗೂ ಗಾಂಧೀಜಿಯವರೊಡನೆ ಗೊರೂರರ ಒಡನಾಟವನ್ನು ಸಂಕ್ಷಿಪ್ತವಾಗಿ ತೆರೆದಿಡುತ್ತಾರೆ.

ಸಾಹಿತಿಗಳ ಒಡನಾಟದಲ್ಲಿ ಬದುಕು ಬರಹದ ವಿಕಾಸ ಎಂಬ ವಿಭಾಗದಲ್ಲಿ ಗೊರೂರರು ತಮ್ಮ ವ್ಯಕ್ತಿಚಿತ್ರಗಳ ಸಂಗ್ರಹ ರಸಫಲ ಕೃತಿಯಲ್ಲಿ ತಮಗೆ ಚಿರಪರಿಚಿತರಾದ 29 ವ್ಯಕ್ತಿಗಳ ಪರಿಚಯದ ಬಗ್ಗೆ ಬರೆಯುತ್ತಾರೆ. ಅವರಲ್ಲಿ ದೇವತಾ ಮನುಷ್ಯರೆಂದು ಪರಿಚಯಿಸುವ ಟಿ. ಎಸ್. ವೆಂಕಣ್ಣಯ್ಯನವರ ಬಗ್ಗೆ ಹೇಳುತ್ತಾ ಅವರ ಹೆಚ್ಚು ಪರಿಚಯದ ಸೌಭಾಗ್ಯವನ್ನು ಹೊಂದಿದವರ ಪೈಕಿ ನಾನೂ ಒಬ್ಬ ಎಂದು ಹರ್ಷಿಸುತ್ತಾರೆ. ಆ ಕಾಲದಲ್ಲಿ ಪ್ರಬುದ್ಧ ಕರ್ನಾಟಕಕ್ಕೆ ಹೆಚ್ಚು ಲೇಖನಗಳನ್ನು ಬರೆಯುತ್ತಿದ್ದೆ. ಒಂದು ಸಲ ಕೃಷ್ಣಶಾಸ್ತ್ರಿಗಳು ವಿನೋದವಾಗಿ ಜ ಚಿಡಿ ಡಿಚಿಜ ಜಿಡಿ ಪ್ರಬುದ್ಧ ಕರ್ನಾಟಕ ಎಂದು ವೆಂಕಣ್ಣಯ್ಯ ಹೇಳುತ್ತಾನೆ. ಚಟ್ನಿ, ಉಪ್ಪಿನ ಕಾಯಿ, ಬಾಳಕ, ಹಪ್ಪಳ, ಪಾಯಸ, ಚಿರೋಟಿ ಯಾರದು ಬೇಕಾದರೂ ಇರಬಹುದು. ಅನ್ನವಂತೂ ಬೇಕೇಬೇಕಷ್ಟೇ. ಎಂದರು ಎಂದು ಹೇಳುತ್ತಾ ನನ್ನ ಕೃತಿಗಳು ಇನ್ನೂ ಉತ್ತಮವಾಗಿರಬೇಕೆಂಬ ಉದ್ದೇಶದಿಂದಲೂ ಅವರು ಹಾಗೆ ಹೇಳಿರಬಹುದು ಎಂದು ಅರ್ಥೈಸಿ ಗೊರೂರರು ತಮ್ಮ ಸರಳತೆಯಿಂದ ಶ್ಲಾಘನೀಯರಾಗುತ್ತಾರೆ. ಡಿ.ಎಲ್.ಎನ್.ರವರ ಪುಣ್ಯಸ್ಮರಣೆ, ಕನ್ನಡಕ್ಕೊಬ್ಬನೇ ಕೈ ಎಂಬ ಬರಹವಾದ ಕೈಲಾಸಂ ಬಗೆಗಿನ ಲೇಖನ, ಪು.ತಿ.ನ. ರಾಜರತ್ನಂ, ಇವರನ್ನು ಬಾಲ್ಯದಿಂದಲೂ ಕಂಡಿದ್ದ ಗೊರೂರರು ಡಾ. ಬಿ.ಜಿ.ಎಲ್. ಸ್ವಾಮಿಯವರ ಬಗ್ಗೆ ಸೇರಿದಂತೆ ಎಲ್ಲರನ್ನೂ ಬಹಳ ಆಪ್ತತೆಯಿಂದ ಪರಿಚಯಿಸುತ್ತಾರೆ. 1930-31ರಲ್ಲಿ ಸಿದ್ಧಗಂಗಾ ಕ್ಷೇತ್ರಕ್ಕೆ ಭೇಟಿ ನೀಡಿದ ಬಗ್ಗೆ ಹೀಗೆ ಬರೆಯುತ್ತಾರೆ. ಆಗ ತಾನೇ ಡಾ. ಶ್ರೀ ಶಿವಕುಮಾರ ಸ್ವಾಮಿಯವರು ಪಟ್ಟಾಭಿಷಿಕ್ತರಾಗಿರುತ್ತಾರೆ. ಆಗ ಸಿದ್ದಗಂಗಾ ಕ್ಷೇತ್ರದ ಮಠ ಇನ್ನೂ ಚಿಕ್ಕದಾಗಿತ್ತು. ನಾವು ಹೋದ ಕೂಡಲೇ ಸ್ವಾಮಿಗಳು ನಮಗೆ ದರ್ಶನವನ್ನು ದಯಪಾಲಿಸಿದರು. ಇವರು ನಿಜವಾಗಿ ಒಳ್ಳೆಯ ಸ್ವಾಮಿಗಳಾಗುತ್ತಾರೆ. ಈ ಕ್ಷೇತ್ರವನ್ನು




ಬೆಳಗುತ್ತಾರೆ. ಇವರಿಂದ ಈ ಸುತ್ತಲ ಪ್ರಾಂತ, ಅಮೃತ ಸೇಚನವನ್ನು, ಜ್ಞಾನ ಗಂಗೋತ್ರಿಯನ್ನು ಪಡೆಯುತ್ತದೆ ಎಂಬ ನಂಬಿಕೆ ನಮ್ಮಲ್ಲಿ ದೃಢವಾಯಿತು.. ಎನ್ನುವುದನ್ನು ರಸಫಲಕೃತಿ ಯಲ್ಲಿನ ಧರ್ಮ ಪ್ರದೀಪ ಲೇಖನದಲ್ಲಿ ಬರೆದಿದ್ದಾರೆ. ಇದು ಗೊರೂರರ ದೂರದರ್ಶಿತ್ವಕ್ಕೆ ಸಾಕ್ಷಿಯಾಗಿದೆ. ಅವರ ಅಂದಿನ ನಂಬಿಕೆ ಇಂದಿಗೆ ಸಾಕಾರವಾಗಿರುವುದು ನಿಜಕ್ಕೂ ಶ್ಲಾಘನೀಯ ಎಂದು ಲೇಖಕರಾದ ಗೊರೂರು ಅನಂತರಾಜುರವರು ಉತ್ತಮಾಂಶವನ್ನು ದಾಖಲಿಸುವ ಮೂಲಕ ಪುಸ್ತಕದ ಮೌಲ್ಯವನ್ನು ಹೆಚ್ಚಿಸಿದ್ದಾರೆ.

ಬಾಲ್ಯದ ಮೂರು ರಂಗಪ್ರಸಂಗಗಳನ್ನು ವಿವರಿಸುತ್ತಾ ತಾವು ಕನ್ನಡ ಲೋಯರ್ ಸೆಕೆಂಡರಿ ಕಟ್ಟಿದ ವರ್ಷ ತಮ್ಮ ಅಣ್ಣನ ಪಠ್ಯವನ್ನು ಆಧರಿಸಿ ಬುದ್ಧನ ಕಥೆಯನ್ನು ಸಂಭಾಷಣೆಯ ರೂಪದಲ್ಲಿ ಬರೆಯುತ್ತಾರೆ. ಅದೇ ಊರಿನಲ್ಲಿ ವಾಸವಿದ್ದ ಅವರ ಮುಖ್ಯ ಶಿಕ್ಷಕರು ಅದನ್ನು ನಾಟಕ ರೂಪಗೊಳಿಸಿ ಇವರೆಲ್ಲರಿಂದ ಆಡಿಸಿದಾಗ ಬುದ್ಧನ ಪಾತ್ರ ವಹಿಸಿದ ತಾವು ಬುದ್ಧನ ಉಪದೇಶಕ್ಕೆ ಪುರಂದರ ದಾಸರ ಹಾಡನ್ನು ಹಾಡಿದ್ದನ್ನು ಶುದ್ಧ ಅಸಂಬದ್ಧ ಪ್ರಲಾಪ ಎಂದು ತಮಗೆ ತಾವೇ ವಿನೋದಮಾಡಿಕೊಳ್ಳುತ್ತಾರೆ. ಕಿತ್ತಾನೆ ಹವ್ಯಾಸಿ ಕಲಾಸಂಘದವರು ರಥೋತ್ಸವದ ಸಂದರ್ಭದಲ್ಲಿ ಸಂಪೂರ್ಣ ರಾಮಾಯಣ ನಾಟಕವಾಡಲು ಬರುತ್ತಾರೆ. ಆದರೆ ಸೀತೆಗೆ ಚೂಡಾಮಣಿಯನ್ನು ಕೊಟ್ಟ ಸಣ್ಣಕಪಿಯ ಪಾತ್ರವನ್ನು ಮಾಡುವ ನಟನ ಗೈರುಹಾಜರಿಯಲ್ಲಿ ತಾವೇ ಸಣ್ಣಕಪಿಯಾದದ್ದನ್ನು ತಿಳಿಸಿರುವುದು ಬಹಳ ಸ್ವಾರಸ್ಯವಾಗಿದೆ. ಮತ್ತೊಂದು ವೈಜ್ಞಾನಿಕ ಪ್ರಹಸನದಲ್ಲಿ ತಾವೇ ಪ್ರಮುಖ ಪಾತ್ರವಾದ ವೈಜ್ಞಾನಿಕನಾಗಿ ತಮ್ಮ ವಿಶಿಷ್ಟ ವೇಷಭೂಷಣ, ಸಂಭಾಷಣೆಗಳಿಂದ ಜನರನ್ನು ನಗಗಡಲಲ್ಲಿ ತೇಲಿಸಿದ್ದನ್ನು ನೆನಪಿಸುತ್ತಾರೆ.

ಮುಂದುವರೆದಂತೆ ಡಾ.ಗೊರೂರರ ಪ್ರಬಂಧಗಳು, ಕಥೆಗಳು, ಕಾದಂಬರಿಗಳು, ಜನಪದ ಸಾಹಿತ್ಯ, ಪ್ರವಾಸಕಥನ, ಜೀವನ ಚಿತ್ರಗಳ ಸ್ಥೂಲ ಪರಿಚಯವನ್ನು ನೀಡುತ್ತಾರೆ. ಗೊರೂರರ ಸಾಹಿತ್ಯ ವಿಮರ್ಶೆಯ ಕುರಿತೂ ಮಾಹಿತಿಯನ್ನು ಒದಗಿಸಿದ್ದಾರೆ.

ಬಾಲ್ಯದಲ್ಲಿ ಓದಿನ ಕಡೆಗೆ ಗಮನ ಹರಿಸದೇ ತುಂಟಾಟದಲ್ಲಿ ತೊಡಗಿಕೊಂಡಿದ್ದರೂ ಗಾಂಧೀಜಿಯವರ ಪ್ರಭಾವದಿಂದ ಗಾಂಧಿವಾದಿಗಳಾಗಿ ಸ್ವಾಧ್ಯಯನದಿಂದ ಜ್ಞಾನಸಂಪತ್ತನ್ನು ತಮ್ಮದಾಗಿಸಿಕೊಂಡು ತಾವು ಕಂಡದ್ದನ್ನು ಅನುಭವದ ಸಾರವನ್ನು ಬರಹರೂಪಕ್ಕಿಳಿಸಿ ಮೇರುಸಾಹಿತಿಯಾದ ಗೊರೂರರ ಬಗ್ಗೆ ವಿದ್ವಾಂಸರ ಮಹಾನ್ ಸಾಹಿತಿಗಳ ಅಭಿಪ್ರಾಯಗಳನ್ನು ಸಂಗ್ರಹಿಸಿ ದಾಖಲಿಸಿದ್ದಾರೆ. ಕಡೆಯ ಪುಟಗಳಲ್ಲಿ ಡಾ. ಗೊರೂರರ ಕೃತಿಗಳ ಬಗ್ಗೆ ಜೀವನದ ಮುಖ್ಯ ಘಟನೆಗಳ ಬಗ್ಗೆ ಮಾಹಿತಿಯಿದೆ. ಗೊರೂರು ಅನಂತರಾಜುರವರ ಈ ಪುಸ್ತಕವು ವಿಸ್ತಾರವಾಗಿ ರೆಂಬೆಗಳನ್ನು ಚಾಚಿ ಹರಡಿರುವ ಡಾ. ಗೊರೂರು ರಾಮಸ್ವಾಮಿ ಅಯ್ಯಂಗಾರ್‌ರವರೆಂಬ ಮಹಾನ್ ವೃಕ್ಷವನ್ನು ಚಿಕ್ಕದಾಗಿ ಚೊಕ್ಕವಾಗಿ ಲಭ್ಯ ಚೌಕಟ್ಟಿನಲ್ಲಿ ಸೆರೆಹಿಡಿದು ಚಿತ್ರಪಟಗೊಳಿಸಿದಂತಿದೆ ಎಂದು ಹೇಳಬಹುದಾಗಿದೆ. ಲೇಖಕರ ಉತ್ತಮ ಪ್ರಯತ್ನಕ್ಕೆ ಅಭಿನಂದನೆಗಳು.

**– ಪ್ರಭಾಮಣಿ ನಾಗರಾಜ, ಹಾಸನ.,** ವಿಳಾಸ: ಹುಣಸಿನಕೆರೆ ಬಡಾವಣೆ, 29ನೇ ವಾರ್ಡ್, 80 ಅಡಿ ರಸ್ತೆ, ಹಾಸನ-573201.

# ಜನ ಸೇವೆ ಮಾಡಿ ದ್ವೇಷ ರಾಜಕಾರಣ ಬಿಡಿ

## ಎಲ್ಲಾ ಸಮುದಾಯಗಳನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ನಾಯಕರು ಅಗತ್ಯ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ

• ಪ್ರಜೋದಯ ವರದಿ

**ಕೆ.ಆರ್.ನಗರ:** ದ್ವೇಷದ ರಾಜಕಾರಣ ಮಾಡದೇ ಎಲ್ಲಾ ಸಮುದಾಯಗಳನ್ನೂ ಒಟ್ಟಿಗೆ ತೆಗೆದುಕೊಂಡು ಹೋಗುವ ನಾಯಕರು ಅಗತ್ಯ ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಹೇಳಿದರು.

ತಾಲ್ಲೂಕಿನ ತಿಪ್ಪೂರು ಗ್ರಾಮದಲ್ಲಿ ಒಕ್ಕಲಿಗರ ಸಮುದಾಯ ಭವನವನ್ನು ಭಾನುವಾರ ಉದ್ಘಾಟಿಸಿದ ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಭವನದಲ್ಲಿ ಇತರ ಸಮಾಜದ ಜನರ ಶುಭ ಕಾರ್ಯಕ್ಕೂ ಅವಕಾಶ ಕೊಡಿ. ರಿಯಾಯಿತಿ ನೀಡಿ ಹೃದಯ ವೈಶಾಲ್ಯತೆ ತೋರಿ ಎಂದು ಒಕ್ಕಲಿಗ ಸಮಾಜದ ಮುಖಂಡರನ್ನು ಕೋರಿದರು.

ತಿಪ್ಪೂರು ಗ್ರಾಮದಲ್ಲಿ 21 ಸಮುದಾಯಗಳಿರುವುದು ಬಹಳ ಅಪರೂಪದ ವಿಷಯ. ಎಲ್ಲ ಸಮುದಾಯದವರೂ ನೆಮ್ಮದಿ, ಸಂತೋಷದಿಂದ ಜೀವನ ನಡೆಸುತ್ತಿರುವುದು ನನಗೆ ಸಂತಸ ಉಂಟು ಮಾಡಿದೆ ಎಂದ ಅವರು, ಜಾತಿ-ಧರ್ಮ ನೋಡುವುದಿಲ್ಲ, ನಾನು ಜಾತಿಧರ್ಮ ನೋಡಿ ರಾಜಕಾರಣ ಮಾಡುವ



ವ್ಯಕ್ತಿಯಲ್ಲ. ಎಲ್ಲಾ ಸಮುದಾಯಗಳನ್ನೂ ಒಳಗೊಂಡು, ಎಲ್ಲರಿಗೂ ಒಳ್ಳೆಯದಾಗುವ ರೀತಿಯಲ್ಲಿ ಕೆಲಸ ಮಾಡಿದ್ದೇನೆ. ಎರಡು ಬಾರಿ ಮುಖ್ಯಮಂತ್ರಿ ಆಗಿದ್ದಾಗಲೂ ಆ ರೀತಿಯಲ್ಲೇ ಸರ್ಕಾರ ನಡೆಸಿದ್ದೇನೆ ಎಂದರು.

ರಾಜಕಾರಣದಲ್ಲಿ ಏಳು-ಬೀಳು ಸಹಜ. ಸೋಲು ಗೆಲುವು ಎರಡನ್ನೂ ಸಮಚಿತ್ತದಿಂದ ಸ್ವೀಕರಿಸಬೇಕು. ಗೆದ್ದಾಗ ಬೀಗುವುದು, ಬಿದ್ದಾಗ ಮಾನಸಿಕವಾಗಿ ಕುಗ್ಗುವುದು ಬೇಕಿಲ್ಲ. ಎಲ್ಲವನ್ನೂ ಜನರೇ ತೀರ್ಮಾನಿಸುತ್ತಾರೆ ಎಂದು ನುಡಿದರು.

ಜೆಡಿಎಸ್ ಮುಖಂಡ ಸಾ.ರಾ. ಮಹೇಶ್ ಅವರು ಮಾತನಾಡಿ, ತಿಪ್ಪೂರು ಗ್ರಾಮದಲ್ಲಿ ಶಾಲೆಯ ನೂತನ ಕಟ್ಟಡ ನಿರ್ಮಾಣಕ್ಕೆ ಅನುದಾನ ನೀಡಿದವರು, ಗ್ರಾಮದ ಕುಡಿಯುವ ನೀರಿನ ಯೋಜನೆಗಾಗಿ 32 ಕೋಟಿ ರೂ. ಕೊಡಿಸಿದವರು, ಊರನ್ನು ಸುವರ್ಣ ಗ್ರಾಮ ಯೋಜನೆ ವ್ಯಾಪ್ತಿಗೆ ತಂದವರು ಕುಮಾರಸ್ವಾಮಿ. ಅವರು ಮುಖ್ಯಮಂತ್ರಿ ಆಗಿದ್ದಾಗ ಹಾಗೂ ನಾನು ಸಚಿವನಾಗಿದ್ದಾಗ ಇದೆಲ್ಲವೂ ನಡೆದಿದೆ ಎಂದು ಅವರು ಹೇಳಿದರು.

ರಾಜಕಾರಣ ನಿಂತ ನೀರಲ್ಲ. ನಾನು ಶಾಸಕನಾಗಿದ್ದಾಗ ಇತರ ಪಕ್ಷಗಳ ಕಾರ್ಯಕರ್ತರಿಗೆ ತೊಂದರೆ ಕೊಟ್ಟವನಲ್ಲ. ವಿದ್ಯುತ್ ಕಡಿತಗೊಳಿಸುವುದು, ಬ್ಯಾನರ್ ತೆಗೆಸುವುದು ಅಥವಾ ಪೊಲೀಸ್ ಕೇಸ್ ಹಾಕಿಸುವುದು ಯಾವುದನ್ನೂ ನಾನು ಮಾಡಿಲ್ಲ. ಆದರೆ, ಇಂದು ನಮ್ಮ ಪಕ್ಷದ ಕಾರ್ಯಕರ್ತರಿಗೆ ಅನಗತ್ಯವಾಗಿ ಕಿರುಕುಳ ನೀಡುವ ಕೆಲಸ ಆಗುತ್ತದೆ. ಪರಿಸ್ಥಿತಿ ಹೀಗೆಯೇ ಇರುವುದಿಲ್ಲ, ಈಗ ತೊಂದರೆ ಕೊಡುತ್ತಿರುವವರು ಮುಂದೆ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಪರೋಕ್ಷವಾಗಿ ಕಾಂಗ್ರೆಸ್ ಕಾರ್ಯಕರ್ತರಿಗೆ ಎಚ್ಚರಿಕೆ ನೀಡಿದರು.

ನಂತರ ಸಚಿವ ಕುಮಾರಸ್ವಾಮಿ ಅವರು, ಗ್ರಾಮದ ಶ್ರೀರಾಮ ವಾಲ್ಮೀಕಿ ಯುವಕರ ಸಂಘಕ್ಕೆ ಭೇಟಿ ನೀಡಿ, ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿದರು. ಬಳಿಕ ಭಗೀರಥ ಉಪ್ಪಾರರ ಸಮುದಾಯ ಭವನಕ್ಕೆ ಭೇಟಿ ನೀಡಿದ ಮುಖಂಡರೊಂದಿಗೆ ಸಂವಾದ ನಡೆಸಿದರು. ಅವರ ಕೋರಿಕೆಯಂತೆ, ಸಮುದಾಯ ಭವನದ ಮುಂದುವರಿದ ಕಾಮಗಾರಿಗೆ ತಕ್ಷಣವೇ 10 ಲಕ್ಷ ರೂ. ಒದಗಿಸುವ ಹಾಗೂ 40 ಲಕ್ಷ ರೂ. ಮೊತ್ತವನ್ನು ಶೀಘ್ರದಲ್ಲೇ ಬಿಡುಗಡೆ ಮಾಡುವ ಭರವಸೆ ನೀಡಿದರು.

ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಮಾಜಿ ಶಾಸಕ ಮಹದೇವು, ಜೆಡಿಎಸ್ ಮೈಸೂರು ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಎಂ. ಅಶ್ವಿನ್‌ಕುಮಾರ್, ನಗರ ಘಟಕದ ಅಧ್ಯಕ್ಷ ಎಸ್‌ಬಿಎಂ ಮಂಜು ಹಾಗೂ ಮುಖಂಡರು ಸೇರಿ ಇನ್ನಿತರರು ಪಾಲ್ಗೊಂಡಿದ್ದರು.

# ರಾಜ್ಯದಲ್ಲಿ ಮುಂದಿನ 3 ದಿನ ಮಳೆ ಜೋರು





• ಪ್ರಜೋದಯ ವರದಿ

**ಬೆಂಗಳೂರು:** ರಾಜ್ಯದಾದ್ಯಂತ ಮುಂದಿನ ಕೆಲವು ದಿನಗಳ ಕಾಲ ವರುಣನ ಆರ್ಭಟ ಜೋರಾಗಿರಲಿದ್ದು, ಹವಾಮಾನ ಇಲಾಖೆಯು ರಾಜ್ಯದ ವಿವಿಧ ಜಿಲ್ಲೆಗಳಿಗೆ ಹೈ ಅಲರ್ಟ್ ಘೋಷಿಸಿದ್ದು, ಮುಖ್ಯವಾಗಿ ಕರಾವಳಿ ಮತ್ತು ಮಲೆನಾಡು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇದೆ. ಹೀಗಾಗಿ ಮುಂದಿನ ಮೂರು ದಿನಗಳ ಕಾಲ ರೆಡ್ ಅಲರ್ಟ್ ಸೂಚಿಸಲಾಗಿದೆ.

**ಯೆಲ್ಲೋ ಅಲರ್ಟ್:** ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಗದಗ್ ಮತ್ತು ಹಾವೇರಿ ಜಿಲ್ಲೆಗಳಲ್ಲಿ ಸಾಧಾರಣದಿಂದ ಭಾರಿ ಮಳೆಯಾಗುವ ನಿರೀಕ್ಷೆಯಿದ್ದು, ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ.

**ಆರೆಂಜ್ ಅಲರ್ಟ್:** ಮಲೆನಾಡು ಮತ್ತು ಕರಾವಳಿ ಭಾಗದ ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ, ಶಿವಮೊಗ್ಗ ಹಾಗೂ ಕೊಡಗು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದ್ದು, ಆರೆಂಜ್ ಅಲರ್ಟ್ ನೀಡಲಾಗಿದೆ.

**ರೆಡ್ ಅಲರ್ಟ್:** ಕರಾವಳಿ ಜಿಲ್ಲೆಗಳಾದ ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಜುಲೈ 6 ರಿಂದ 8 ರವರೆಗೆ ಭಾರಿ ಮಳೆಯಾಗುವ ಮುನ್ಸೂಚನೆ ಇದ್ದು, ರೆಡ್ ಅಲರ್ಟ್ ಘೋಷಿಸಲಾಗಿದೆ.

**ಕರಾವಳಿಯಲ್ಲಿ ವರುಣಾರ್ಭಟ**

ಇಂದು ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಗಂಟೆಗೆ 40-50 ಕಿಲೋ ಮೀಟರ್ ವೇಗದಲ್ಲಿ ಬಲವಾದ ಗಾಳಿ ಬೀಸಲಿದ್ದು, ಭಾರೀ ಮಳೆಯಾಗುವ ಸಾಧ್ಯತೆಯಿದೆ. ಸಾರ್ವಜನಿಕರು ಹಾಗೂ ಮೀನುಗಾರರು ಎಚ್ಚರಿಕೆಯಿಂದ ಇರಲು ಸೂಚಿಸಲಾಗಿದೆ.

**ಕಲ್ಯಾಣ ಕರ್ನಾಟಕದಲ್ಲಿ ಸಾಧಾರಣ ಮಳೆ**

ಬೆಳಗಾವಿ, ಧಾರವಾಡ, ಗದಗ ಮತ್ತು ಹಾವೇರಿ ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಭಾರೀ ಮಳೆಯೊಂದಿಗೆ 40-50 ಕಿ.ಮೀ ವೇಗದ ಗಾಳಿ ಬೀಸಲಿದೆ. ಬಾಗಲಕೋಟೆ, ಬಿದರ್, ಕಲಬುರಗಿ, ಕೊಪ್ಪಳ, ರಾಯಚೂರು, ವಿಜಯಾಪುರ ಮತ್ತು ಯಾದಗಿರಿ ಜಿಲ್ಲೆಗಳ ಬಹುತೇಕ ಕಡೆಗಳಲ್ಲಿ ಬಲವಾದ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆಯಾಗಲಿದೆ.

**ಮಲೆನಾಡಿನ ಪರಿಸ್ಥಿತಿ ಏನು?**

ಶಿವಮೊಗ್ಗ, ಚಿಕ್ಕಮಗಳೂರು, ಹಾಸನ ಮತ್ತು ಕೊಡಗು ಜಿಲ್ಲೆಗಳ ಒಂದೆರಡು ಕಡೆಗಳಲ್ಲಿ ಭಾರಿ ಯಿಂದ ಅತಿ ಭಾರಿ ಮಳೆಯಾಗುವ ಮುನ್ಸೂಚನೆ ಇದೆ. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ತುಮಕೂರು ಮತ್ತು ವಿಜಯನಗರ ಜಿಲ್ಲೆಗಳ ಹಲವು ಕಡೆಗಳಲ್ಲಿ ಜೋರಾದ ಗಾಳಿಯೊಂದಿಗೆ ಹಗುರದಿಂದ ಸಾಧಾರಣ ಮಳೆಯಾಗಲಿದೆ.

# ಮುಕ್ತ ಹಡಗುಗಳ ಸಂಚಾರ: ಗ್ಯಾಸ್ ನಿಯಂತ್ರಣ ಹಿಂಪಡೆದ ಭಾರತ

• ಪ್ರಜೋದಯ ವರದಿ

**ನವದೆಹಲಿ:** ಪಶ್ಚಿಮ ಏಷ್ಯಾ (ಮಧ್ಯ ಪ್ರಾಚ್ಯ) ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಉಂಟಾಗಿದ್ದ ಜಾಗತಿಕ ಇಂಧನ ಆತಂಕ ಸದ್ಯಕ್ಕೆ ದೂರವಾಗಿದೆ. ಹಾರ್ಮುಜ್ ಜಲಸಂಧಿ ಮೂಲಕ ದ್ರವೀಕೃತ ನೈಸರ್ಗಿಕ ಅನಿಲ ಹಡಗುಗಳ ಸಂಚಾರ ಮತ್ತು ಪೂರೈಕೆ ಯಥಾಸ್ಥಿತಿಗೆ ಮರಳಿದೆ.

ಈ ಹಿನ್ನೆಲೆಯಲ್ಲಿ, ದೇಶದಲ್ಲಿ ಹೇರಲಾಗಿದ್ದ ತುರ್ತು ನೈಸರ್ಗಿಕ ಅನಿಲ ಪೂರೈಕೆ ನಿಯಂತ್ರಣದ ನಿಯಮಗಳನ್ನು ಭಾರತ ಸರ್ಕಾರ ಅಧಿಕೃತವಾಗಿ ಹಿಂಪಡೆದಿದೆ. ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಸಚಿವಾಲಯವು ನೈಸರ್ಗಿಕ ಅನಿಲ (ಪೂರೈಕೆ ನಿಯಂತ್ರಣ) ಆದೇಶ, 2026 ಕ್ಕೆ ತಿದ್ದುಪಡಿ ತಂದು ಈ ಅಧಿಸೂಚನೆ ಹೊರಡಿಸಿದೆ.

**ಬಿಕ್ಕಟ್ಟಿನ ಹಿನ್ನೆಲೆ ಮತ್ತು ತುರ್ತು ಕ್ರಮಗಳು**

ಮಧ್ಯಪ್ರಾಚ್ಯದಲ್ಲಿ ಯುದ್ಧದ ವಾತಾವರಣ ನಿರ್ಮಾಣವಾಗಿ ಫೆಬ್ರವರಿ



ಯಲ್ಲಿ ಇರಾನ್ ಮೇಲೆ ಅಮೆರಿಕ ಮತ್ತು ಇಸ್ರೇಲ್ ದಾಳಿ ನಡೆಸಿದ್ದವು. ಇದಕ್ಕೆ ಪ್ರತಿಯಾಗಿ ಇರಾನ್ ಕೂಡ ಪ್ರತಿದಾಳಿ ನಡೆಸಿತ್ತು. ಈ ಸಂಘರ್ಷದ ಪರಿಣಾಮವಾಗಿ ಜಗತ್ತಿನ ಅತ್ಯಂತ ಪ್ರಮುಖ ಸಮುದ್ರ ಮಾರ್ಗವಾದ ಹಾರ್ಮುಜ್ ಜಲಸಂಧಿ ಬಹುತೇಕ ಮುಚ್ಚಲ್ಪಟ್ಟಿತ್ತು. ಇದರಿಂದ ಕತಾರ್ ಸೇರಿದಂತೆ ಗಲ್ಫ್ ದೇಶಗಳಿಂದ ಭಾರತಕ್ಕೆ ಬರಬೇಕಿದ್ದ ಎಲ್‌ಎನ್‌ಜಿ ಸರಬರಾಜು ಸಂಪೂರ್ಣ ಸ್ಥಗಿತಗೊಂಡಿತ್ತು.

ಗ್ಯಾಸ್ ಪೂರೈಕೆದಾರ ಕಂಪನಿಗಳು ಫೋರ್ಸ್ ಮೆರ್ಜ (ಅನಿವಾರ್ಯ ಪರಿಸ್ಥಿತಿಯ ನಿಯಮ) ಘೋಷಿಸಿ ಹಡಗುಗಳನ್ನು ಬೇರೆಡೆಗೆ ತಿರುಗಿಸಿದ್ದವು. ಈ ಬಿಕ್ಕಟ್ಟನ್ನು ನಿಭಾಯಿಸಲು ಭಾರತ ಸರ್ಕಾರ ಮಾರ್ಚ್ 9 ರಂದು ದೇಶಾದ್ಯಂತ ತುರ್ತು ಗ್ಯಾಸ್ ನಿಯಂತ್ರಣ ಆದೇಶ ಜಾರಿಗೊಳಿಸಿತ್ತು.

**ಅಂದು ಸರ್ಕಾರ ಕೈಗೊಂಡಿದ್ದ ಪ್ರಮುಖ ಕ್ರಮಗಳು**

ಗೃಹಬಳಕೆಯ ಪೈಪ್ಡ್ ಗ್ಯಾಸ್, ವಾಹನಗಳ ಆಟೋ ಗ್ಯಾಸ್ ಮತ್ತು ಎಲ್‌ಪಿಜಿ ಉತ್ಪಾದನೆಗೆ ಯಾವುದೇ ಅಡಚಣೆಯಾಗದಂತೆ 100% ಗ್ಯಾಸ್ ಪೂರೈಕೆಯನ್ನು ಕಾಯ್ದಿರಿಸಲಾಗಿತ್ತು. ಇದಕ್ಕಾಗಿ ಪೆಟ್ರೋಕೆಮಿಕಲ್ ಪ್ಲಾಂಟ್‌ಗಳು, ವಿದ್ಯುತ್ ಉತ್ಪಾದನಾ ಘಟಕಗಳು ಮತ್ತು ಕೈಗಾರಿಕೆಗಳಿಗೆ ನೀಡಲಾಗುತ್ತಿದ್ದ ಗ್ಯಾಸ್ ಪೂರೈಕೆಯಲ್ಲಿ 20% ರಿಂದ 35% ವರೆಗೆ ಕಡಿತ ಮಾಡಲಾಗಿತ್ತು.

ತೈಲ ಸಂಸ್ಕರಣಾಗಾರಗಳು ತಮ್ಮ ಸರಾಸರಿ ಬಳಕೆಯ ಕೇವಲ 65% ಗ್ಯಾಸ್ ಮಾತ್ರ ಬಳಸುವಂತೆ ಸೂಚಿಸಲಾಗಿತ್ತು.

**ತೈಲ ಪರಿಸ್ಥಿತಿಯಲ್ಲಿ ಈಗ ಬದಲಾಗಿರುವುದೇನು?**

ಪಶ್ಚಿಮ ಏಷ್ಯಾದಲ್ಲಿ ಸದ್ಯ ಕದನ ವಿರಾಮ ಘೋಷಣೆಯಾಗಿದ್ದು, ಶಾಂತಿ ಮಾತುಕತೆಗಳು ಆರಂಭವಾಗಿವೆ. ಅಲ್ಲದೆ, ಹಾರ್ಮುಜ್ ಜಲಸಂಧಿ ಮೂಲಕ ವಾಣಿಜ್ಯ ಹಡಗುಗಳ ಸಂಚಾರಕ್ಕೆ ಸಂಪೂರ್ಣ ಮುಕ್ತ ಅವಕಾಶ ನೀಡಲಾಗಿದೆ. ಭಾರತಕ್ಕೆ ಬರಬೇಕಿದ್ದ ಎಲ್‌ಎನ್‌ಜಿ ಹಡಗುಗಳು ಸುರಕ್ಷಿತವಾಗಿ ಬಂದಿಳಿಯುತ್ತಿರುವುದರಿಂದ ಸಚಿವಾಲಯವು ಎಲ್ಲಾ ತುರ್ತು ನಿರ್ಬಂಧಗಳನ್ನು ತೆಗೆದುಹಾಕಿದೆ.

# ಉಗ್ರರ ಪಟ್ಟಿಗೆ 23 ಜನ ಸೇರ್ಪಡೆ: ಕೇಂದ್ರ ಘೋಷಣೆ

• ಪ್ರಜೋದಯ ವರದಿ

**ನವದೆಹಲಿ:** ದೇಶದ ಆಂತರಿಕ ಭದ್ರತೆಯನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಗೃಹ ಸಚಿವಾಲಯವು ಭಾರೀ ಕಾನೂನು ಕ್ರಮ ಜರುಗಿಸಿದೆ. ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಹೊಸದಾಗಿ 23 ಜನರನ್ನು 'ಭಯೋತ್ಪಾದಕರು' ಎಂದು ಕೇಂದ್ರ ಸರ್ಕಾರ ಅಧಿಕೃತವಾಗಿ ಘೋಷಿಸಿದೆ.

ಈ ಹೊಸ ಪಟ್ಟಿಯೊಂದಿಗೆ ದೇಶದಲ್ಲಿ ಯುಎಪಿಎ ಕಾಯ್ದೆಯಡಿ ನಿಷೇಧಕ್ಕೊಳಗಾದ ಉಗ್ರರ ಒಟ್ಟು ಸಂಖ್ಯೆ 80ಕ್ಕೆ ಏರಿಕೆಯಾಗಿದೆ ಎಂದು ಸರ್ಕಾರದ ಅಧಿಸೂಚನೆ ತಿಳಿಸಿದೆ. ಈ ಕುರಿತು ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ಇಂದು ಪ್ರಕಟಿಸಲಾದ ಪಟ್ಟಿಯಲ್ಲಿ 17 ಮಂದಿ ಪಾಕಿಸ್ತಾನಿ ಪ್ರಜೆಗಳಾಗಿದ್ದರೆ, 6 ಜನ ಭಾರತೀಯ ಮೂಲದವರಾಗಿದ್ದಾರೆ.

ಸದ್ಯ ಇವರೆಲ್ಲರೂ ಭಾರತದಿಂದ ಪರಾರಿಯಾಗಿದ್ದು, ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಜಮ್ಮು-ಕಾಶ್ಮೀರ



ದಿಂದ ತಮ್ಮ ಕರಾಳ ಜಾಲವನ್ನು ನಿಯಂತ್ರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಯುವಕರ ಬ್ರೇನ್‌ವಾಶ್ ಮಾಡುತ್ತಿದ್ದ ಬೆಂಗಳೂರಿನ ಟೆಕ್ಕಿ ಹೊಸ ಉಗ್ರರ ಪಟ್ಟಿಯಲ್ಲಿ ಬೆಂಗಳೂರಿನ ಸಾಫ್ಟ್‌ವೇರ್ ಇಂಜಿನಿಯರ್, 40 ವರ್ಷದ ಮೊಹಮ್ಮದ್ ಶಹೀದ್ ಫೈಸಲ್ ಎಂಬಾತನ ಹೆಸರು ಮುಂಚೂಣಿಯಲ್ಲಿದೆ.

ಬೆಂಗಳೂರಿನ ಪ್ರತಿಷ್ಠಿತ ಕಾಲೇಜಿನಲ್ಲಿ (2004-2008) ಇಂಜಿನಿಯರಿಂಗ್ ಮುಗಿಸಿದ್ದ ಈತ, ಕೆಲವು ವರ್ಷ ಬೆಂಗಳೂರಿನಲ್ಲೇ ಸಾಫ್ಟ್‌ವೇರ್ ಇಂಜಿನಿಯರ್ ಆಗಿ ಕೆಲಸ ಮಾಡಿದ್ದ. ಆನಂತರ ಸೌದಿ ಅರೇಬಿಯಾಕ್ಕೆ ತೆರಳಿದವನು ಅಲ್ಲಿಂದ ನೇರವಾಗಿ ಪಾಕಿಸ್ತಾನ ಸೇರಿಕೊಂಡಿದ್ದ ಎಂದು ತಿಳಿದು ಬಂದಿದೆ. ಎನ್‌ಐಎಗೆ 2012 ರಿಂದಲೇ ಮೋಸ್ಟ್ ವಾಂಟೆಡ್ ಆಗಿರುವ ಈತನ ತಲೆಗೆ 10 ಲಕ್ಷ ರೂ. ಬಹುಮಾನ ಘೋಷಿಸಲಾಗಿದೆ.

2024ರಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ 'ದಿ ರಾಮೇಶ್ವರಂ ಕೆಫೆ' ಐಇಡಿ ಸ್ಫೋಟದ ಪ್ರಮುಖ ಹ್ಯಾಂಡ್ಲರ್ ಇದೇ ಫೈಸಲ್ ಎಂದು ರಾಷ್ಟ್ರೀಯ ತನಿಖಾ ದಳ ಗುರುತಿಸಿದೆ. ಕಳೆದ 14 ವರ್ಷಗಳಲ್ಲಿ ಕರ್ನಾಟಕದಲ್ಲಿ ಸಕ್ರಿಯವಾಗಿದ್ದ ಮೂರು ಪ್ರಮುಖ ಉಗ್ರ ಮಾಡ್ಯೂಲ್‌ಗಳನ್ನು ಈತನೇ ಆಪರೇಟ್ ಮಾಡಿದ್ದ ಎನ್ನಲಾಗಿದೆ.

# ಭಾರತ - ಇಂಗ್ಲೆಂಡ್ 3ನೇ ಪಂದ್ಯ ಜು.7ಕ್ಕೆ

• ಪ್ರಜೋದಯ ವರದ

**ನಾಟಿಂಗ್‌ಹ್ಯಾಮ್:** ಭಾರತ ಮತ್ತು ಇಂಗ್ಲೆಂಡ್ ನಡುವಣ ಐದು ಪಂದ್ಯಗಳ ಟಿ 20 ಸರಣಿಯ ಮೊದಲ ಮ್ಯಾಚ್ ಮಳೆಯ ಕಾರಣ ರದ್ದಾಗಿತ್ತು. ಇನ್ನು ದ್ವಿತೀಯ ಪಂದ್ಯದಲ್ಲಿ ಭಾರತ ತಂಡಕ್ಕೆ ಸೋಲುಣಿಸುವಲ್ಲಿ ಇಂಗ್ಲೆಂಡ್ ಯಶಸ್ವಿಯಾಗಿದೆ. ಇದೀಗ ಸರಣಿಯಲ್ಲಿ ಸಮಬಲ ಸಾಧಿಸಬೇಕಿದ್ದರೆ ಟೀಮ್ ಇಂಡಿಯಾ ಮೂರನೇ ಟಿ 20 ಪಂದ್ಯದಲ್ಲಿ ಜಯ ಸಾಧಿಸಲೇಬೇಕು.

ಭಾರತ ಮತ್ತು ಇಂಗ್ಲೆಂಡ್ ನಡುವಣ ಟಿ-20 ಸರಣಿಯ ಮೊದಲೆರಡು ಪಂದ್ಯಗಳು ಮುಗಿವೆ. ಐದು ಮ್ಯಾಚ್‌ಗಳ ಈ ಸರಣಿಯ ಮೊದಲ ಪಂದ್ಯವು ಮಳೆಗೆ ಆಹುತಿಯಾಗಿತ್ತು. ಇನ್ನು ಮ್ಯಾಂಚೆಸ್ಟರ್‌ನಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಜಯ ಸಾಧಿಸಿದೆ. ಇದೀಗ ಉಭಯ ತಂಡಗಳು ಮೂರನೇ ಪಂದ್ಯಕ್ಕಾಗಿ ನಾಟಿಂಗ್ ಹ್ಯಾಮ್‌ಗೆ ಪ್ರಯಾಣ ಬೆಳೆಸಲಿದ್ದಾರೆ.

# ಅರಸೀಕೆರೆಯಲ್ಲಿ ಹಲವು ಸಮಸ್ಯೆ: ಆಕ್ರೋಶ

• ಪ್ರಜೋದಯ ವರದಿ

**ಅರಸೀಕೆರೆ:** ನಗರಸಭೆಯಲ್ಲಿ ಚುನಾಯಿತ ಬಾಡಿ ಅಸ್ತಿತ್ವದಲ್ಲಿರದ ಕಾರಣ ನಗರ ವ್ಯಾಪ್ತಿಯಲ್ಲಿ ಸಾರ್ವಜನಿಕರು ಎದುರಿಸುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸುವ ಕೆಲಸ ಮಾಡಲಾಗುತ್ತಿದೆ ಎಂದು ಕಳೆದ ವಿಧಾನಸಭೆ ಚುನಾವಣೆಯ ಪರಾಜಿತ ಅಭ್ಯರ್ಥಿ ಎನ್.ಆರ್.ಸಂತೋಷ್ ಹೇಳಿದರು.

ನಿತ್ಯ ಮುಂಜಾನೆ ನಗರದಲ್ಲಿ ವಾರ್ಡ್‌ವಾರು ಪರ್ಯಟನೆ ಮಾಡುತ್ತಿದ್ದು, ನಗರ ವ್ಯಾಪ್ತಿಯ ಕೆಲವು ಬಡಾವಣೆಗಳಲ್ಲಿ ಚರಂಡಿ ಹಾಗೂ ಒಳಚರಂಡಿ ಸಮಸ್ಯೆ ಸಾರ್ವಜನಿಕರನ್ನು ಕಾಡುತ್ತಿದೆ. ಅಲ್ಲದೆ ಸುದೀರ್ಘಾವಧಿ ನಗರಸಭೆಯನ್ನು ಮುನ್ನಡೆಸಿದ ಚುನಾಯಿತ ಜನಪ್ರತಿನಿಧಿಗಳ ಕಾರ್ಯ ವೈಖರಿಯನ್ನು ಅಣಕಿಸುತ್ತಿದೆ ಎಂದು ಅವರು ವ್ಯಂಗ್ಯವಾಡಿದರು.

ಕಾಂಕ್ರೀಟ್ ರಸ್ತೆ ಹಾಕಿಸುವ ಬರದಲ್ಲಿ ಅವೈಜ್ಞಾನಿಕವಾಗಿ ಕಾಮಗಾರಿ ಮಾಡಿರುವುದರಿಂದ ರಸ್ತೆ ನಿರ್ಮಾಣಕ್ಕೆ ಅನುಗುಣವಾಗಿ ಚರಂಡಿ ನಿರ್ಮಾಣವಾಗದೆ ಇರುವುದು ರಸ್ತೆ ಬದಿಯ ಮನೆಗಳು ತಗ್ಗಾಗಿ ಮಳೆಗಾಲದಲ್ಲಿ



ಮಳೆ ನೀರು ಮನೆಗೆ ನುಗ್ಗುವ ಮೂಲಕ ಅವಾಂತರ ಸೃಷ್ಟಿಸುವಂತಹ ಕಳಪೆ ಕಾಮಗಾರಿಯನ್ನು ಮಾಡಿರುವುದು ಶಾಸಕರು ಮತ್ತು ಅವರ ಬೆಂಬಲಿಗರ ಅಭಿವೃದ್ಧಿ ಪರ ಚಿಂತನೆಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ದೂರಿದರು.

ಅವೈಜ್ಞಾನಿಕ ಒಳಚರಂಡಿ ಕಾಮಗಾರಿಯಿಂದಾಗಿ ರೋಸಿ ಹೋಗಿರುವ ನಗರದ ಜನತೆ ಒಳಚರಂಡಿ ಸಂಪರ್ಕವನ್ನು ಚರಂಡಿಗಳಿಗೆ ಬಿಟ್ಟಿರುವುದರಿಂದ ನಗರದ ಬಹುತೇಕ ರಸ್ತೆಗಳಲ್ಲಿ ಸಂಚರಿಸುವ ಜನರಿಗೆ ದುರ್ನಾಥ ಬೀರುತ್ತಿದೆ. ಅಲ್ಲದೆ ಸಾಂಕ್ರಾಮಿಕ ರೋಗ ಹರಡುವ ಭೀತಿ ನಗರದ ಜನತೆಯನ್ನು ಕಾಡುತ್ತಿದೆ ಎಂದು ಕಳವಳ ಸಂತೋಷ್ ಅವರು ವ್ಯಕ್ತಪಡಿಸಿದರು.

ನಗರಸಭೆಯಲ್ಲಿ ಚುನಾಯಿತ ಬಾಡಿ ಇಲ್ಲ ಎಂದು ಲಗಾಮ್ ಇಲ್ಲದ ಹುಚ್ಚು ಕುದುರೆಯಂತೆ ನಗರಸಭೆ ಅಧಿಕಾರಿಗಳು ಸಾರ್ವಜನಿಕರೆದುರು ನಡೆದುಕೊಂಡರೆ ಅದನ್ನು ಸಹಿಸಿಕೊಂಡು ಸುಮ್ಮನಿರುವುದಿಲ್ಲ ಎಂದು ಎಚ್ಚರಿಕೆ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಗುರುಸಿದ್ದೇಶ್, ರಮೇಶ್ ನಾಯ್ಡು, ಶಿವನ್ ರಾಜ್, ನಗರಸಭೆ ನಿಕಟ ಪೂರ್ವ ಸದಸ್ಯ ಪುಟ್ಟರಾಜು, ಇನ್ನಿತರರು ಉಪಸ್ಥಿತರಿದ್ದರು.

# ಯುವನಿಧಿ ಯೋಜನೆಯ ಸ್ವಯಂ ಘೋಷಣೆ

• ಪ್ರಜೋದಯ ವರದ

**ಹಾಸನ:** ಪಂಚ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಯುವನಿಧಿ ಯೋಜನೆಯಲ್ಲಿ ನೋಂದಣಿಯಾದ ಅಭ್ಯರ್ಥಿಗಳು ಕಡ್ಡಾಯವಾಗಿ ಆಧಾರ ಸೀಡೆಡ್ ಬ್ಯಾಂಕ್ ಖಾತೆ ಹೊಂದಿರಬೇಕು. ಅರ್ಜಿಯು ಯಾವ ಹಂತದಲ್ಲಿದೆ ಎಂಬುದನ್ನು ಪರಿಶೀಲಿಸಿಕೊಂಡು ಹಾಗೂ ಪರಿಶೀಲನೆಗೆ ಬಾಕಿ ಉಳಿದಿರುವ ಅಭ್ಯರ್ಥಿಗಳು ಮಾತ್ರ ಸೂಚಿಸಲ್ಪಟ್ಟ ಇಲಾಖೆಯ ಕಚೇರಿಗಳಿಗೆ ತಮ್ಮ ಎಲ್ಲ ಮೂಲ ಅಂಕಪಟ್ಟಿ ಹಾಗೂ ಇತರೆ ಪ್ರಮಾಣ ಪತ್ರಗಳೊಂದಿಗೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸಿ ಶೀಘ್ರವಾಗಿ ದೃಢೀಕರಿಸಿಕೊಳ್ಳಬಹುದು.

ಈಗಾಗಲೇ ನೋಂದಾಯಿಸಿಕೊಂಡು ಹಣ ಪಡೆಯುತ್ತಿರುವ ಫಲಾನುಭವಿಗಳು ಪ್ರತಿ ತಿಂಗಳು 25ನೇ ದಿನಾಂಕ ದೊಳಗೆ ಸ್ವಯಂ ಘೋಷಣೆಯನ್ನು ಮಾಡಿಕೊಳ್ಳಬೇಕಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕಚೇರಿ ದೂರವಾಣಿ ಸಂಖ್ಯೆ: 08172-296374 ನ್ನು ಸಂಪರ್ಕಿಸುವಂತೆ ಹಾಸನ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿ ತಿಳಿಸಿದ್ದಾರೆ.

# ಯೋಗದಿಂದ ಮೈ-ಮನಸ್ಸುಗಳ ಒಂದುಗೂಡಿಕೆ

• ಪ್ರಜೋದಯ ವರದಿ

ಹಾಸನ: ಯೋಗ ಎಂದರೆ ಮೈ ಮನಸ್ಸುಗಳನ್ನಷ್ಟೇ ಒಂದುಗೂಡಿಸದೆ, ಸಮಾಜದೊಳಗೆ ಎಲ್ಲರೊಳಗೊಂದಾಗಿ ಬಾಳುವ ಮನಸ್ಥಿತಿಯನ್ನು ರೂಢಿಸಿಕೊಳ್ಳಲು ಸಹಕಾರಿ ಎಂದು ಕನ್ನಡ ವಿದ್ವಾಂಸ, ಪ್ರಾಧ್ಯಾಪಕ ಜಿ.ಎಸ್. ಮಂಜುನಾಥ ತಿಳಿಸಿದರು.

ನಗರದ ಮಹಾರಾಜ ಪಾರ್ಕಿನಲ್ಲಿರುವ ವಿವೇಕಾನಂದ ಜೋಗ ಶಿಕ್ಷಣ ಶಾಲೆಯಲ್ಲಿ ಶಿಕ್ಷಣಾರ್ಥಿಗಳು ಆಯೋಜಿಸಿದ್ದ ಯೋಗ ಗುರು ಹೆಚ್.ಬಿ.ರಮೇಶ್ ಅವರ 95ನೇ ಹುಟ್ಟುಹಬ್ಬದ ನಿಮಿತ್ತ ಮಾತನಾಡಿ, ದೈಹಿಕ ಶಿಕ್ಷಕ, ಯೋಗಗುರು, ನಟ, ನಾಟಕಕಾರ, ರಂಗಕರ್ಮಿ, ಲೇಖಕ ಸಾಹಿತ್ಯಪ್ರೇಮಿ, ಸಂಘಟಕ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ, ಹೀಗೆ ವಿವಿಧ ವ್ಯಕ್ತಿತ್ವದ ಎಚ್.ಬಿ.ರಮೇಶ್ ಅವರು ಹಾಸನ ಜಿಲ್ಲೆಯ ಸಾಹಿತ್ಯ, ರಂಗಭೂಮಿ ಹಾಗೂ ಯೋಗ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪಾರವಾದದ್ದು, ಪ್ರಾಧ್ಯಾಪಕರಾಗಿದ್ದ ಸಂದರ್ಭದಲ್ಲಿ ಭಾವಾಭಿನಯದ ಮೂಲಕ ಪ್ರತಿ ಪಾತ್ರಗಳನ್ನು ವಿದ್ಯಾರ್ಥಿಗಳಿಗೆ ಮನನ ಮಾಡುತ್ತಿದ್ದ ಅವರು ಶಿಸ್ತಿನ ಸಿಪಾಯಿ





ಕೂಡ ಆಗಿದ್ದರು ಎಂದರು.

ಡಯಟ್‌ನ ಹಿರಿಯ ಉಪನ್ಯಾಸಕ ಹರೀಶ್ ಮಾತನಾಡಿ, ಹಾಸನ ಜಿಲ್ಲೆಯ ಮೊದಲ ಯೋಗ ಗುರು ಹೆಚ್.ಬಿ.ರಮೇಶ್. 50 ವರ್ಷಗಳಿಂದಲೂ ಯೋಗ ಶಿಕ್ಷಣ ನೀಡುತ್ತಿರುವ ಅವರು 30 ವರ್ಷಗಳ ಹಿಂದೆ ಇಡೀ ಹಾಸನದಾದ್ಯಂತ ಸಂಚರಿಸಿ ಯೋಗ ಶಿಬಿರಗಳನ್ನು ಮಾಡಿ ಯೋಗದ ಪ್ರಸರಣದಲ್ಲಿ ಹೆಚ್.ಬಿ.ರಮೇಶ್ ಅವರು ಮಹತ್ವದ ಪಾತ್ರ ವಹಿಸಿದ್ದಾರೆ ಎಂದರು.

ವಿವೇಕಾನಂದ ಯೋಗ ಶಿಕ್ಷಣ ಶಾಲೆಯನ್ನು ಯೋಗದ ಜೊತೆಗೆ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೇಂದ್ರವನ್ನಾಗಿಸಿದ್ದ ಹೆಚ್.ಬಿ. ರಮೇಶ್ ಸತತ ನೂರು ದಿನಗಳ ಕಾಲ ಕುವೆಂಪುರವರ ಶ್ರೀ ರಾಮಾಯಣ ದರ್ಶನಂನ ವಚನ ವ್ಯಾಖ್ಯಾನ, ಒಂದು ವರ್ಷ ಪ್ರತಿ ಬಾನುವಾರ ಡಿವಿಜಿ ಅವರ ಮಂಕುತಿಮ್ಮನ ಕಗ್ಗ ವ್ಯಾಖ್ಯಾನ ಹಾಗೂ ಜಿಲ್ಲೆಯ ಪ್ರಮುಖ ಲೇಖಕರನ್ನು ಗುರುತಿಸಿ ಶಾಲೆಯಲ್ಲಿ ಗೌರವಿಸಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ ಜನರ ಮನಸ್ಸಿನಲ್ಲಿ ಉಳಿಯುವಂತಹ ಕೆಲಸ ಮಾಡಿದ್ದಾರೆ ಎಂದು ಹೇಳಿದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಎಚ್.ಬಿ.ರಮೇಶ್ ನೂರು ತೊಟ್ಟು ರಕ್ತದಿಂದ ಒಂದು ತೊಟ್ಟು ತಾಯಿ ಹಾಲು ಸೃಷ್ಟಿಯಾಗುತ್ತದೆ. ಅಂತಹ ತಾಯಿಯನ್ನು ಗೌರವಿಸುವ ತಾಯಿ ನಾಡನ್ನು ಪ್ರೀತಿಸುವ ಮನೋಭಾವ ಎಲ್ಲರಲ್ಲೂ ಮೂಡಬೇಕು. ವಿವೇಕಾನಂದ ಯೋಗ ಶಿಕ್ಷಣ ಶಾಲೆ ನನ್ನಿಂದಾದದ್ದಲ್ಲ ನಮ್ಮಿಂದ ಆದದ್ದು. ಅನೇಕರು ಸೇರಿ ಕೈಗೂಡಿಸಿ ಶಾಲೆಯನ್ನು ಪ್ರವರ್ಧಮಾನಕ್ಕೆ ತಂದಿದ್ದು ಅವರೆಲ್ಲರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮಾಜಿ ನಗರಸಭಾ ಅಧ್ಯಕ್ಷೆ ಶ್ರೀಮತಿ ಅಂಬಿಕಾ ರವಿಶಂಕರ್ ಎಚ್.ಬಿ.ರಮೇಶ್ ಅವರ ಭಾವಚಿತ್ರ ಅನಾವರಣ ಮಾಡಿದರು.

ಯೋಗ ಶಾಲೆಯ ಹಿರಿಯ ಶಿಕ್ಷಣಾರ್ಥಿಗಳಾದದ ಧರ್ಮಪ್ಪ, ಪುಟ್ಟಪ್ಪ, ನಿವೃತ್ತ ಅಕೌಂಟೆಂಟ್ ಆನಂದ್, ಹಾಪ್ಕಾಮ್ಸ್ ಸುರೇಶ್, ಆನಂದ್, ರಾಜೇಶ್, ಪರಮೇಶ್, ಜ್ಞಾನೇಶ್ವರ್, ಚೆಲುವೇಗೌಡ, ಅರ್ಚಕ ಪರಮೇಶ್, ಚೆಲುವೇಗೌಡ, ನಾಗರಾಜ್, ಮೋಹನ ಕುಮಾರಿ, ರುಕ್ಮಿಣಿ, ಕೋಮಲ, ಜ್ಯೋತಿ, ಚಂದ್ರಕಲ, ಕಲಾವತಿ, ಪಂಕಜ, ಕೋಮಲ, ತುಳಸಿ,ಪದ್ಮ, ಸುಮನಾ, ರಮ್ಯ ಹಾಗೂ ಇತರ ಶಿಕ್ಷಣಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

# ಅಪಘಾತ: ವ್ಯಕ್ತಿ ಸಾವು

ಆಲೂರು: ಮಳೆ ಗಾಳಿಯಿಂದ ರಸ್ತೆಗೆ ಅಡ್ಡಲಾಗಿ ಬಿದ್ದಿದ್ದ ಮರಕ್ಕೆ ರಾತ್ರಿ ವೇಳೆಯಲ್ಲಿ ಬೈಕು ಡಿಕ್ಕಿ ಹೊಡೆದ ಪರಿಣಾಮ, ಬೈಕ್ ಸವಾರ ಹೊಸಳ್ಳಿ ದೀಕ್ಷಿತ್(22) ನರಳಾಡಿ ಮೃತಪಟ್ಟ ಘಟನೆ ಕೆ. ಹೊಸಕೋಟೆ ಹೋಬಳಿ ಕರಡಿಬೆಟ್ಟ ಗ್ರಾಮದ ಬಳಿ ಶುಕ್ರವಾರ ರಾತ್ರಿ ಸಂಭವಿಸಿದೆ.

4 ತಿಂಗಳ ಹಿಂದಷ್ಟೆ ವಿವಾಹವಾಗಿದ್ದ ದೀಕ್ಷಿತ್, ತನ್ನ ಪತ್ನಿಯನ್ನು ತವರು ಮನೆಗೆ ಬಿಟ್ಟು ರಾತ್ರಿ 11 ಗಂಟೆಯಲ್ಲಿ ಸ್ವಗ್ರಾಮ ಹೊಸಳ್ಳಿಗೆ ಬರುವ ವೇಳೆಯಲ್ಲಿ ರಸ್ತೆಯಲ್ಲಿ ಅಡ್ಡ ಬಿದ್ದಿದ್ದ ಮರಕ್ಕೆ ಬೈಕ್ ಡಿಕ್ಕಿಯಾಗಿದೆ. ಈ ವೇಳೆ ತಲೆಗೆ ತೀವ್ರ ಗಾಯವಾಗಿದೆ. ಈ ರಸ್ತೆಯಲ್ಲಿ ರಾತ್ರಿ ವೇಳೆಯಲ್ಲಿ ಯಾವುದೆ ವಾಹನ ಹಾಗೂ ಜನರು ಓಡಾಡುವುದು ವಿರಳವಾದ್ದರಿಂದ, ಅಪಘಾತ ಸುದ್ದಿ ಯಾರಿಗೂ ತಿಳಿದಿರಲಿಲ್ಲ. ಅಪಘಾತವಾದ ತಕ್ಷಣ ಆಸ್ಪತ್ರೆಗೆ ಕರೆದೊಯ್ದಿದ್ದರೆ ಪ್ರಾಣ ಉಳಿಯುತ್ತಿತ್ತೇನು ಎನ್ನಲಾಗಿದೆ. ಇಡಿ ರಾತ್ರಿ, ಗಾಳಿ, ಮಳೆಯಿಂದ ನರಳಾಡಿ ಪ್ರಾಣ ಬಿಟ್ಟಿದ್ದಾನೆ.

ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಕುಡಿದಲೆ ಸಂದೇಶ್ ತಮ್ಮ ತೋಟಕ್ಕೆ ಹೋಗುವ ಸಂದರ್ಭದಲ್ಲಿ ಅಪಘಾತದಿಂದ ನರಳಾಡುತ್ತಿದ್ದುದನ್ನು ಗಮನಿಸಿ ತಮ್ಮ ಕಾರಿನಲ್ಲಿ ಆಸ್ಪತ್ರೆಗೆ ಸೇರಿಸಲು ಕರೆದೊಯ್ದರು. ಅಷ್ಟರಲ್ಲಿ ಎದುರಿನಿಂದ ಬಂದ ಆಂಬುಲೆನ್ಸ್ ಚಾಲಕ ವ್ಯಕ್ತಿ ಮೃತಪಟ್ಟಿರುವುದಾಗಿ ತಿಳಿಸಿದರು. ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಗಾಂಧಿ ಮತ್ತು ಗ್ರಾಮ ಗೊರೂರರ ಕಣ್ಣುಗಳಾಗಿದ್ದವು: ಗೊರೂರು ಶಿವೇಶ್

# ಗಾಂಧೀಜಿಯವರ ಆದರ್ಶ ಮೈಗೂಡಿಸಿಕೊಂಡಿದ್ದ ಗೊರೂರರು

• ಪ್ರಜೋದಯ ವರದಿ

**ಹಾಸನ:** ಗಾಂಧಿ ಮತ್ತು ಗ್ರಾಮ ಗೊರೂರರ ಎರಡು ಕಣ್ಣುಗಳಾಗಿದ್ದವು ಎಂದು ಲೇಖಕರು ನಿವೃತ್ತ ಆಂಗ್ಲ ಭಾಷಾ ಉಪನ್ಯಾಸಕ ಗೊರೂರು ಶಿವೇಶ್ ತಿಳಿಸಿದರು.

ಅವರು ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ ವತಿಯಿಂದ ಸತ್ಯಮಂಗಲದ ಟೈಮ್ಸ್ ಪಿಯು ಕಾಲೇಜಿನಲ್ಲಿ ಆಯೋಜಿಸಿದ್ದ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಜನ್ಮ ದಿನ ಕಾರ್ಯಕ್ರಮದ ಅಂಗವಾಗಿ ಗೊರೂರರ ಬದುಕು ಮತ್ತು ಬರಹಗಳಲ್ಲಿ ಗಾಂಧಿ ಮತ್ತು ಗ್ರಾಮ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದ ಅವರು, ಗಾಂಧೀಜಿಯವರ ಸರಳತೆ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ ಗೊರೂರರಿಗೆ ಗ್ರಾಮ ಹೃದಯವಾಗಿದ್ದರೆ, ಗಾಂಧೀಜಿಯವರು ಆತ್ಮವಾಗಿದ್ದಾರೆ. ಗಾಂಧೀಜಿಯವರ ಆದರ್ಶಗಳನ್ನು ಮೈಗೂಡಿಸಿಕೊಂಡಿದ್ದ ಗೊರೂರರು ಗಾಂಧೀಜಿಯವರ ಆತ್ಮಕಥೆಯನ್ನು ಕನ್ನಡಕ್ಕೆ ತಂದರು. ಗ್ರಾಮೋದ್ಧಾರದ ಅಂಗವಾಗಿ ಗುಡಿ ಕೈಗಾರಿಕೆ, ಗ್ರಾಮೋದ್ಯೋಗ ಭವನ, ಸೇವಾ ಸಹಕಾರ ಸಂಘ, ಊರಿನ ಸ್ವಚ್ಛತೆ, ಶಾಲೆ, ಆಸ್ಪತ್ರೆಗಳ ನಿರ್ಮಾಣಕ್ಕೆ ಪ್ರೇರಣೆ



ನೀಡಿ ಗೊರೂರು ಗ್ರಾಮವನ್ನು ಮಾದರಿ ಗ್ರಾಮವನ್ನಾಗಿಸಲು ಶ್ರಮಿಸಿದರು ಎಂದು ವಿವರಿಸಿದರು.

ಗೊರೂರು ರಾಮಸ್ವಾಮಿ ಅಯ್ಯಂಗಾರರ ಪುತ್ರಿ ಗೊರೂರು ವಸಂತಿಮೂರ್ತಿ ಮಾತನಾಡಿ, ನಮ್ಮ ತಂದೆ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಸಮಯದಲ್ಲಿಯೇ ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿದರು. ಸಬರಮತಿಯಲ್ಲಿ ಗಾಂಧೀಜಿಯವರ ಆಶ್ರಮದಲ್ಲಿ ಇದ್ದು ಆಶ್ರಮದಿಂದ ಹೊರ ತರುತ್ತಿದ್ದ ಪತ್ರಿಕೆಗಳಲ್ಲಿ ಕಂಪೋಸಿಟರ್ ಕೆಲಸ ನಿರ್ವಹಿಸಿದ್ದಲ್ಲದೆ ಬೆಂಗಳೂರಿನ ಕೆಂಗೇರಿಯ ಖಾದಿ ಭಂಡಾರದಲ್ಲಿ ಕೆಲಸ ನಿರ್ವಹಿಸಿ ಮುಂದೆ ಪರೀಕ್ಷಕರಾಗಿ ಕೆಲಸ ಮಾಡಲು ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಹೊರಟಾಗ ಅವರೇ ಬರೆದ ನಮ್ಮೂರಿನ ರಸಿಕರು ಪಠ್ಯವನ್ನು ಓದಿ ಬರೆಯಬೇಕಾಗಿ ಬಂತು. ಗೊರೂರು ಟ್ರಸ್ಟ್ ಮೂಲಕ ಗೊರೂರಿನ ಅವರ ವಾಸದ ಮನೆಯನ್ನು ಪುಸ್ತಕ ವಸ್ತು ಸಂಗ್ರಹಾಲಯ ಹಾಗೂ ಸ್ಮರಣ ಭವನ ಮಾಡಲು ಮತ್ತು ಅವರ ಹೆಸರಿನಲ್ಲಿ ಪ್ರತಿ ವರ್ಷ ಪ್ರಶಸ್ತಿ ನೀಡಲು ಹಾಗೂ ಗೊರೂರರು ತಮ್ಮ ಅಂತಿಮ ದಿನಗಳನ್ನು ಕಳೆದ ಅವರು ವಾಸಿಸುತ್ತಿದ್ದ ರಾಜಾಜಿನಗರದ ಮೆಟ್ರೋ ಸ್ಟೇಷನ್‌ಗೆ ಗೊರೂರರ ಹೆಸರನ್ನು ಇಡಬೇಕೆಂದು ಮನವಿ ಮಾಡಿದರು.

ಸಾಹಿತಿ ಗೊರೂರು ಅನಂತರಾಜು ಮಾತನಾಡಿ, ಗೊರೂರರು ಸ್ವಾತಂತ್ರ್ಯ ಹೋರಾಟ ಮತ್ತು ಸಾಹಿತ್ಯ, ಜನಪದ ಕ್ಷೇತ್ರದಲ್ಲಿ ಮಾಡಿದ ಸಾಧನೆಗಳನ್ನು ಸಮಾಜಮುಖಿ ಕೆಲಸಗಳನ್ನು ಯುವ ಜನರಿಗೆ ಪರಿಚಯಿಸಲು ಶಾಲಾ-ಕಾಲೇಜುಗಳಲ್ಲಿ ಜೊತೆಗೆ ಸಾರ್ವಜನಿಕ ಕಾರ್ಯಕ್ರಮಗಳನ್ನು ಸಹೃದಯರ ಬೆಂಬಲದೊಂದಿಗೆ ನಡೆಸಲು ಪ್ರಯತ್ನಿಸಿರುವುದಾಗಿ ತಿಳಿಸಿದರು.

ತಾವು ಡಾ.ಗೊರೂರು ಸ್ಮರಣ ಸಮಿತಿ ಮಾಡಿ 1991ರಿಂದಲೇ ಅವರ ನಿವಾಸವನ್ನು ಸ್ಮಾರಕವಾಗಿಸಲು ಹಲವಾರು ಸೆಮಿನಾರ್ ಗಳನ್ನು ಏರ್ಪಡಿಸಿ ಹಾಸನದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಸರ್ಕಾರಕ್ಕೆ ಮನವಿ ಮಾಡಿದ್ದೆವು. ಈಗಲೂ ಈ ವೇದಿಕೆ ಮೂಲಕ ಮತ್ತೊಮ್ಮೆ ಮನವಿ ಮಾಡುತ್ತಿದ್ದು ಸರ್ಕಾರ ಈ ದಿಶೆಯಲ್ಲಿ ಕ್ರಮ ಕೈಗೊಳ್ಳಬೇಕೆಂದು ಕೋರಿದರು. ಗೊರೂರಿಗೆ ಭೇಟಿ ನೀಡುವ ಪ್ರವಾಸಿಗರು, ಸಾಹಿತ್ಯಾಭಿಮಾನಿಗಳು ಅವರ ಮನೆ ನೋಡಲು ಇಚ್ಛಿಸುತ್ತಾರೆ ಎಂದು ತಿಳಿಸಿದರು.

ಚಿತ್ರಕಲಾವಿದ ಬಿ.ಎಸ್.ದೇಸಾಯಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಮತ್ತು ಕಲೆಯ ಕುರಿತಾಗಿ ಆಸಕ್ತಿ ಮೂಡಿಸಲು ಕರ್ನಾಟಕ ವಿದ್ಯಾವರ್ಧಕ ಸಂಘ ಧಾರವಾಡ ವತಿಯಿಂದ ಟೈಮ್ಸ್ ಪಿಯು ಕಾಲೇಜ್ ನೆರವಿನಿಂದ ಕಾರ್ಯಕ್ರಮವನ್ನು ಆಯೋಜಿಸಿದ್ದು ತುಂಬಾ ಫಲಪ್ರದವಾಗಿದೆ ಎಂದು ಹೇಳಿದರು.

ಪ್ರಾಧ್ಯಾಪಕ ಡಾ.ಕುಶಾಲ್ ಬರಗೂರು ಮಾತನಾಡಿ, ವಿದ್ಯಾರ್ಥಿಗಳು ಮೊಬೈಲ್ ಅನ್ನು ದೂರವಿಟ್ಟು ಪುಸ್ತಕವನ್ನು ಕೈಗಿಡಿಯಬೇಕು ಎಂದರು.

ಟೈಮ್ಸ್ ಪಿಯು ಕಾಲೇಜಿನ ಅಧ್ಯಕ್ಷ ಎ.ಬಿ. ಸುರೇಂದ್ರ ಕುಮಾರ್, ಗಾಯಕ ಗೊರೂರು ಶ್ರೀಕಾಂತ್, ಕಲಾವಿದ ಯಾಕೂಬ್ ಗೊರೂರು, ಪ್ರಾಂಶುಪಾಲೆ ಶೈಲಜಾ ರೈ, ಗೊರೂರರ ಸಹೋದರನ ಪುತ್ರಿ ಪದ್ಮ ವಿಜಯಸಾರಥಿ, ಉಪನ್ಯಾಸಕ ಅರವಿಂದ್ ಉಪಸ್ಥಿತರಿದ್ದರು.

# ಪ್ರಧಾನಿ ಮೋದಿಗೆ ಪ್ರಶಸ್ತಿ ನೀಡಿದ್ದಕ್ಕೆ ಟೀಕೆ ಪಾಕ್ ಸಚಿವ ಆಸೀಫ್ ಅಸ್ವಸ್ಥ ಎಂದ ಭಾರತ

• ಪ್ರಜೋದಯ ವರದಿ

**ಹೊಸದಿಲ್ಲಿ:** ಸೀಶೆಲ್ಸ್ ದೇಶವು ಪ್ರಧಾನಿ ನರೇಂದ್ರ ಮೋದಿ ಅವರಿಗೆ ನೀಡಿದ ಗಾರ್ಡಿಯನ್ ಆಫ್ ದಿ ಬ್ಲೂ ಹಾರಿಜಾನ್ ಪ್ರಶಸ್ತಿಯನ್ನು ಪ್ರಶ್ನಿಸಿದ ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸೀಫ್ ಅವರ ವಿರುದ್ಧ ಭಾರತ ಸರ್ಕಾರ ತೀವ್ರ ವಾಗ್ದಾಳಿ ನಡೆಸಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಸರ್ಕಾರಿ ಮೂಲಗಳು, ಖ್ವಾಜಾ ಆಸೀಫ್ ಮಾನಸಿಕವಾಗಿ ಅಸ್ವಸ್ಥರಾಗಿರುವುದು ಎಲ್ಲರಿಗೂ ತಿಳಿದ ವಿಚಾರ. ಅಂತಹ ವ್ಯಕ್ತಿಗೆ ಪಾಕಿಸ್ತಾನದಲ್ಲಿ ರಕ್ಷಣಾ ಸಚಿವರಂತಹ ಜವಾಬ್ದಾರಿಯನ್ನು ನೀಡಿರುವುದು ಆ ದೇಶದ ದುಸ್ಥಿತಿಯನ್ನು ತೋರಿಸುತ್ತದೆ. ಅವರಿಗೆ ಮಾಡಲು ಬೇರೆ ಕೆಲಸವಿಲ್ಲದ ಕಾರಣ, ವಿಷಯದ ಅರಿವಿಲ್ಲದೆ ಇಂತಹ ಬಾಲಿಶ ಹೇಳಿಕೆಗಳನ್ನು ನೀಡುತ್ತಿದ್ದಾರೆ. ಅಸೂಯೆ ಮತ್ತು ದ್ವೇಷವೇ ಅವರ ಇಂತಹ ಹೇಳಿಕೆಗಳಿಗೆ ಪ್ರಮುಖ ಕಾರಣ ಎಂದು ತರಾಟೆಗೆ ತೆಗೆದುಕೊಂಡಿವೆ.

**ಪ್ರಶಸ್ತಿಯನ್ನು ಟೀಕಿಸಿದ್ದ ಆಸೀಫ್**

ಪ್ರಧಾನಿ ಮೋದಿಗೆ ನೀಡಿದ ಈ ಪ್ರಶಸ್ತಿ ಸೃಷ್ಟಿಸಿದ ಪ್ರಶಸ್ತಿ ಎಂದು ಆಸೀಫ್ ಲೇವಡಿ ಮಾಡಿದ್ದರು. ಅಲ್ಲದೆ, ಪ್ರಶಂಸಾಪತ್ರದಲ್ಲಿನ ಕಾಗುಣಿತ ತಪ್ಪುಗಳನ್ನು ಎತ್ತಿ ತೋರಿಸಿ, ಇದು ಅತ್ಯಂತ ನಾಚಿಕೆಗೇಡಿನ ಸಂಗತಿ ಎಂದು ಹೀಯಾಳಿಸಿದ್ದರು.



**ಸೀಶೆಲ್ಸ್ ಸ್ಪಷ್ಟನೆ**

ಈ ಆರೋಪಗಳನ್ನು ಸೀಶೆಲ್ಸ್ ಸರ್ಕಾರವು ಸಾರಾಸಗಟಾಗಿ ತಳ್ಳಿಹಾಕಿದೆ. ಈ ಪ್ರಶಸ್ತಿಯು ದೇಶದ 'ರಾಷ್ಟ್ರೀಯ ಗೌರವ ಕಾಯ್ದೆ'ಯ ಅಡಿಯಲ್ಲಿ ಸ್ಥಾಪಿಸಲ್ಪಟ್ಟಿದೆ ಮತ್ತು ಪ್ರಧಾನಿ ಮೋದಿಯವರ ಭೇಟಿಗೆ ಮೊದಲೇ ಇದನ್ನು ಅಧಿಕೃತವಾಗಿ ಅನುಮೋದಿಸಲಾಗಿತ್ತು ಎಂದು ಸೀಶೆಲ್ ಅಧ್ಯಕ್ಷರ ಕಚೇರಿ ಸ್ಪಷ್ಟಪಡಿಸಿದೆ.

ಇಂಟರ್ನೆಟ್‌ನಲ್ಲಿ ವೈರಲ್ ಆಗಿದ್ದ ದಾಖಲೆಯು ಕೇವಲ ಒಂದು ಆಂತರಿಕ ಕರಡು ಪ್ರತಿ ಆಗಿದ್ದು, ತಪ್ಪುಗಳನ್ನು ತಿದ್ದುವ ಮುನ್ನವೇ ಆಕಸ್ಮಿಕವಾಗಿ ಸೋರಿಕೆಯಾಗಿತ್ತು. ಆದರೆ, ಪ್ರಧಾನಿ ಮೋದಿಯವರಿಗೆ ನೀಡಲಾದ ಅಂತಿಮ ಪ್ರಮಾಣ ಪತ್ರದಲ್ಲಿ ಯಾವುದೇ ದೋಷಗಳಿಲ್ಲ ಎಂದು ಸೀಶೆಲ್ಸ್ ಸ್ಪಷ್ಟನೆ ನೀಡಿದೆ. ಒಟ್ಟಾರೆಯಾಗಿ, ಪಾಕಿಸ್ತಾನದ ಈ ಟೀಕೆಯು ಸತ್ಯಾಂಶಕ್ಕಿಂತ ಹೆಚ್ಚಾಗಿ ಭಾರತದ ಮೇಲಿರುವ ಅಸೂಯೆಯನ್ನು ಬಿಂಬಿಸುತ್ತಿದೆ ಎಂದು ಭಾರತೀಯ ಮೂಲಗಳು ತಿಳಿಸಿವೆ.

